ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

28 ಜುಲೈ, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ :137 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಗ್ಲಾಸ್ಗೊದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಭಾರತೀಯ ಸೇನೆಯ ಯೋಧ ಜದುಮಣಿಸಿಂಗ್ ಅವರು ಪಾಕಿಸ್ತಾನದ ಬಾಕ್ಸರ್ ವಿರುದ್ಧ ಐತಿಹಾಸಿಕ ಗೆಲುವು ಸಾಧಿಸಿದ್ದಾರೆ.



ವಿದ್ಯಾರ್ಥಿಗಳ ಹೋರಾಟ, ಕ್ರಾಂತಿ ಮತ್ತು ಪ್ರಜಾಪ್ರಭುತ್ವ » 2


ಕಾವೇರಿ : ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲಿ » 3


ಹೋರಾಟಗಾರರ ವಿರುದ್ಧ ಕ್ರಮ ಸಹಿಸುವುದಿಲ್ಲ » 4


## ರಾಜ್ಯದ ಹಿತಕ್ಕಾಗಿ ಒಟ್ಟಾಗೋಣ

### ಸರ್ವಪಕ್ಷ ಸಂಸದರೊಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿ ಸಭೆ | ಬರ ಪರಿಹಾರಕ್ಕೆ ಧ್ವನಿಗೂಡಿಸಲು ಕೋರಿಕೆ

• ಪ್ರಜೋದಯ ವರದಿ

**ನವದೆಹಲಿ :** ರಾಜ್ಯದ ಹಿತ, ಜನರ ಕಲ್ಯಾಣಕ್ಕಾಗಿ ಪಕ್ಷ, ರಾಜಕಾರಣವನ್ನು ಬದಿಗಿಟ್ಟು ಪ್ರಗತಿಗೆ ಮುಂದಾಗೋಣ ವೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಂಸದರಲ್ಲಿ ಮನವಿ ಮಾಡಿದ್ದಾರೆ.

ದೆಹಲಿಯ ಕರ್ನಾಟಕ ಭವನದಲ್ಲಿ ಸೋಮವಾರ ಸರ್ವಪಕ್ಷ ಸಂಸದರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರಗತಿಗೆ ನಿಮ್ಮ ಸಹಕಾರ ಬಯಸುತ್ತೇನೆ. ಕೇಂದ್ರ ಸರ್ಕಾರದ ಮುಂದೆ ಬಾಕಿ ಉಳಿದಿರುವ ರಾಜ್ಯದ ನಾನಾ ಯೋಜನೆಗಳಿಗೆ ಅನುಮತಿ ದೊರಕಿಸಿ ಕೊಡಲು ನಿಮ್ಮ ಸಹಕಾರ ಬಹು ಮುಖ್ಯವೆಂದರು.

ನಾನು ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದಾಗ ಈ ವರ್ಷ ತೀವ್ರ ಬರ ಪರಿಸ್ಥಿತಿ ಎದುರಾಗುವ ಬಗ್ಗೆ ಮುನ್ಸೂಚನೆ ಕೊಟ್ಟಿದ್ದರು. ಕರ್ನಾಟಕದಲ್ಲಿ ಆಲಮಟ್ಟಿ, ಹಾರಂಗಿ ಜಲಾಶಯ ಬಿಟ್ಟು ಉಳಿದ ಅಣೆಕಟ್ಟೆಗಳು ಬಹುತೇಕ ಖಾಲಿಯಾಗಿವೆ. ಇದೇ ಪರಿಸ್ಥಿತಿ ಮುಂದುವರಿದರೆ ಜನ, ಜಾನುವಾರುಗಳಿಗೆ ಕುಡಿಯುವ ನೀರಿಗೂ ಸಮಸ್ಯೆ ಆಗುವ ಲಕ್ಷಣಗಳು ಇವೆ. ರಾಜ್ಯದ ಪರಿಸ್ಥಿತಿ ಬಗ್ಗೆ ಪ್ರಧಾನಿ ಅವರಿಗೆ ಪತ್ರ ಬರೆದಿದ್ದು, ಅಗತ್ಯ ನೆರವು ದೊರೆಯಲು ನಿಮ್ಮ ಸಹಕಾರ ಬೇಕೆಂದರು.





ರಾಜ್ಯದಲ್ಲಿ ಗಂಭೀರ ಬರ ಪರಿಸ್ಥಿತಿ ಇದೆ. ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣ ನೋಡಿಕೊಂಡು ಬೆಳೆ ಬೆಳೆಯುವಂತೆ ರೈತರಿಗೆ ಮನವಿ ಮಾಡಿದ್ದೇನೆ. ಈ ಬಗ್ಗೆ ರೈತರಿಗೆ ಅರಿವು ಮೂಡಿಸುವಂತೆ ಅಧಿಕಾರಿಗಳಿಗೂ ಸೂಚನೆ ನೀಡಲಾಗಿದೆ. ತುಂಗಭದ್ರಾ ಕ್ರಸ್ಟ್ ಗೇಟ್ ಅಳವಡಿಕೆ ನೆಪದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಎಸ್.ಪಾಟೀಲ್ ಅವರ ಸಮ್ಮುಖದಲ್ಲಿ ನಾನು, ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮೂವರು 30 ಟಿಎಂಸಿ ನೀರು ಉಳಿಸಲು ತುಂಗಭದ್ರಾ ನದಿಗೆ ನವಿಲೆ ಸಮತೋಲನ ಜಲಾಶಯ ಕಟ್ಟಲು ಕೇಂದ್ರ ಸಚಿವರ ಸಮ್ಮುಖದಲ್ಲಿ ಒಪ್ಪಿದ್ದೇವೆಂದು ತಿಳಿಸಿದರು.

ಗೋದಾವರಿ, ಕೃಷ್ಣ, ಪೆನ್ನಾರ್, ಕಾವೇರಿ ನದಿಗಳ ಜೋಡಣೆ ಯೋಜನೆಗೂ ನಾವು ಒಪ್ಪಿದ್ದೇವೆ. ಇದೊಂದು ಐತಿಹಾಸಿಕ ತೀರ್ಮಾನ. ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರು ನನ್ನನ್ನು ಭೇಟಿ ಮಾಡಲು ಬಯಸಿದ್ದಾರೆ. ಮೇಕೆದಾಟು ಯೋಜನೆ ಕುರಿತು ಸುಪ್ರೀಂ ಕೋರ್ಟ್ ಎರಡೂ ರಾಜ್ಯಗಳಿಗೆ ಅನುಕೂಲವಾಗುವ ರೀತಿಯಲ್ಲಿ ತೀರ್ಪು ಕೊಟ್ಟಿದೆ. ಕರ್ನಾಟಕದ ಜಾಗದಲ್ಲಿ ಕರ್ನಾಟಕ ಸಮತೋಲನ ಅಣೆಕಟ್ಟೆ ಕಟ್ಟಲು ಬೇರೆ ರಾಜ್ಯಗಳ ಅನುಮತಿ ಅನಗತ್ಯ, ಆಕ್ಷೇಪ ವ್ಯಕ್ತಪಡಿಸಲು ಹಕ್ಕು ಇಲ್ಲವೆಂದು ಸ್ಪಷ್ಟವಾಗಿ ಹೇಳಿದೆ.

ಕೃಷ್ಣ ನ್ಯಾಯಮಂಡಳಿಯ ನೀರು ಹಂಚಿಕೆ ತೀರ್ಮಾನ ಗೆಜೆಟ್ ನೋಟಿಫಿಕೇಶನ್ ಆಗಬೇಕಿತ್ತು. ಈ ಪ್ರಕರಣ ಸುಪ್ರೀಂ ಕೋರ್ಟ್ ನಲ್ಲಿ ಬಾಕಿ ಉಳಿದಿತ್ತು. ಅದನ್ನು ಇತ್ಯರ್ಥ ಪಡಿಸಲು ವಿಶೇಷ ಪೀಠ ಸ್ಥಾಪನೆ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಮಹಾದಾಯಿ ಯೋಜನೆ ಅಡೆತಡೆ ನಿವಾರಣೆಗೆ ನ್ಯಾಯವಾದಿಗಳ ಜೊತೆ ಸಮಾಲೋಚನೆ ನಡೆಸಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯದ ಸಂಸದರು, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಸಚಿವರು ಹಾಜರಿದ್ದರು.

## ಮೇಕೆದಾಟು ಯೋಜನೆಗೆ ತಮಿಳುನಾಡು ಸಮ್ಮತಿ ಅವಶ್ಯವಿಲ್ಲ

• ಪ್ರಜೋದಯ ವರದಿ

**ನವದೆಹಲಿ:** ಕರ್ನಾಟಕದ ಮೇಕೆದಾಟು ಯೋಜನೆಗೆ ತಮಿಳುನಾಡು ಸಮ್ಮತಿ ಬೇಕಾಗಿಲ್ಲವೆಂದು ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದೆ.

ರಾಜ್ಯಸಭೆಯಲ್ಲಿ ತಮಿಳುನಾಡಿನ ಸಂಸದ ಅನ್ಬುಮಣಿ ರಾಮದಾಸ್ ಅವರು ಕೇಳಿದ ಪ್ರಶ್ನೆಗೆ ಜಲಶಕ್ತಿ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ ಅವರು ಲಿಖಿತ ಉತ್ತರ ನೀಡಿದ್ದಾರೆ.

ಕಾವೇರಿ ನದಿ ನೀರು ವಿವಾದ ಸಂಬಂಧ 2018 ರಲ್ಲಿ ನೀಡಲಾದ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಯಾವುದೇ ನಿರ್ಮಾಣ ಕಾರ್ಯ ಕೈಗೊಳ್ಳಲು ಕರ್ನಾಟಕವು ತಮಿಳು ನಾಡು, ಕೇರಳ ಅಥವಾ ಪುದುಚೇರಿಯಿಂದ ಸಮ್ಮತಿ ಪಡೆಯ ಬೇಕೆಂದು ಉಲ್ಲೇಖಿಸಿಲ್ಲ ಎಂದು ಸಂಸತ್ತಿನಲ್ಲಿ ಸ್ಪಷ್ಟಪಡಿಸಿದೆ.

ಕಾವೇರಿ ನದಿಗೆ ಅಡ್ಡಲಾಗಿ ಯಾವುದೇ ರೀತಿಯ ರಚನೆಯನ್ನು ನಿರ್ಮಿಸಲು ತಮಿಳುನಾಡು, ಕೇರಳ ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ಒಪ್ಪಿಗೆಯನ್ನು ಪಡೆಯಬೇಕೆಂಬ ಕಾವೇರಿ ನೀರಿನ ವಿವಾದ ಸಂಬಂಧ 2018ರ ಫೆಬ್ರವರಿಯಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿದಿದೆಯೇ. ಪ್ರಸ್ತಾವಿತ ಮೇಕೆದಾಟು ಯೋಜನೆಗೆ ಕರ್ನಾಟಕ ನದಿ ತೀರ್ಪಿನ ರಾಜ್ಯಗಳ ಒಪ್ಪಿಗೆಯನ್ನು ಪಡೆದಿದೆಯೇ. ಒಪ್ಪಿಗೆ ಪಡೆದಿದ್ದಲ್ಲಿ ಅದರ ವಿವರಗಳು ಮತ್ತು ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆಯ ಪ್ರಸ್ತುತ ಸ್ಥಿತಿ ಏನೆಂದು ಅನ್ಬುಮಣಿ ರಾಮದಾಸ್ ಅವರು ಪ್ರಶ್ನಿಸಿದ್ದರು.

## ವಾರದೊಳಗೆ ಸಚಿವ ಸಂಪುಟ ವಿಸ್ತರಣೆ

• ಪ್ರಜೋದಯ ವರದಿ

**ಬೆಂಗಳೂರು :** ಬಹು ನಿರೀಕ್ಷಿತ ಸಚಿವ ಸಂಪುಟ ವಿಸ್ತರಣೆಗೆ ಕೊನೆಗೂ ಕಾಲ ಕೂಡಿ ಬಂದಿದ್ದು, ವಾರದೊಳಗೆ ಸಂಪುಟ ವಿಸ್ತರಣೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಎಲ್ಲರೂ ಆತುರದಲ್ಲಿದ್ದಾರೆ. ಬಹುತೇಕ ಈ ವಾರದಲ್ಲೇ ಎಲ್ಲಾ ಪ್ರಕ್ರಿಯೆ ಮುಗಿಸುತ್ತೇನೆಂದರು.

**ಗರಿಗೆದರಿದ ಚಟುವಟಿಕೆ**

ಸಚಿವ ಸಂಪುಟ ವಿಸ್ತರಣೆ ಹಿನ್ನಲೆಯಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ಚಟುವಟಿಕೆಗಳು ಗರಿಗೆದರಿವೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ದೆಹಲಿ ಪ್ರವಾಸ ಕೈಗೊಂಡಿದ್ದಾರೆ. ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವ ಶಾಸಕರು ಸಹ ರಾಷ್ಟ್ರ ರಾಜಧಾನಿಗೆ ತೆರಳಿದ್ದಾರೆ.

ಸಿದ್ದರಾಮಯ್ಯ ಅವರ ಅಧಿಕಾರ ಹಸ್ತಾಂತರ ಬಳಿಕ ಜೂನ್ 3ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರೊಟ್ಟಿಗೆ 13 ಖಾತೆಗಳಿಗಷ್ಟೇ ಸಚಿವರ ನೇಮಕ ಮಾಡಲಾಗಿದೆ.

ರಾಜ್ಯದಲ್ಲಿ ಬರ ಪರಿಸ್ಥಿತಿ ತೀವ್ರವಾಗಿದೆ. ಬಿತ್ತಿದ ಬೆಳೆಗಳು ಒಣಗಿ, ರೈತರು ಸಂಕಷ್ಟದಲ್ಲಿದ್ದಾರೆ. ಬರ ಅಧ್ಯಯನಕ್ಕೆ ಮುಖ್ಯಮಂತ್ರಿ ಈಗಾಗಲೇ ಮೂರು ಕಂದಾಯ ವಿಭಾಗಗಳಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದಾರೆ. ಕಂದಾಯ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಮುಖ್ಯಮಂತ್ರಿಯವರ ಜೊತೆಗೆ ಮತ್ತು ಪ್ರತ್ಯೇಕವಾಗಿ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಕೃಷಿ, ತೋಟಗಾರಿಕೆ, ಸಹಕಾರ ಸಚಿವರ ಕೊರತೆ ಎದ್ದು ಕಾಣುತ್ತಿದೆ. ಬೆಳೆ ನಷ್ಟಕ್ಕೆ ಕೃಷಿ ಮತ್ತು ಕಂದಾಯ ಇಲಾಖೆ ಜಂಟಿ ಸಮೀಕ್ಷೆ ನಡೆಸಬೇಕಿತ್ತು. ಸಹಕಾರ ಇಲಾಖೆಯಿಂದ ಕೃಷಿ ಚಟುವಟಿಕೆಗಳಿಗೆ ಬೆಳೆ ಸಾಲ ನೀಡಿ ರೈತರಿಗೆ ನೈತಿಕ ಬೆಂಬಲ ಕೊಡಬೇಕಿತ್ತು. ಆದರೆ, ಸಚಿವರಿಲ್ಲದ ಕಾರಣಕ್ಕೆ ಆ ಕೆಲಸಗಳು ಅಸಮರ್ಪಕವಾಗಿವೆ.

## ಪ್ರಿಯಕರನೊಂದಿಗೆ ಸೇರಿ ಕಳ್ಳತನ ಮಾಡಿದ ಸೊಸೆ

■ 56.16 ಲ.ರೂ. ಮೌಲ್ಯದ ಚಿನ್ನಾಭರಣ, 13.40 ಲ.ರೂ. ದೋಚಿದ್ದ ಪ್ರಕರಣಕ್ಕೆ ಟ್ವಿಸ್ಟ್





• ಪ್ರಜೋದಯ ವರದಿ

**ಹಾಸನ:** ಪ್ರಿಯಕರನೊಂದಿಗೆ ಸೇರಿ ಸೊಸೆಯೇ ಮನೆಯಲ್ಲಿದ್ದ 56.16 ಲ.ರೂ. ಮೌಲ್ಯದ ಚಿನ್ನಾಭರಣ, 13.40 ಲ.ರೂ. ನಗದು ಕಳವು ಪ್ರಕರಣವನ್ನು ಗ್ರಾಮಾಂತರ ಠಾಣೆ ಪೊಲೀಸರು ಭೇದಿಸಿದ್ದಾರೆ.

ತಾಲ್ಲೂಕಿನ ದೊಡ್ಡಹೊನ್ನೇನಹಳ್ಳಿ ಗ್ರಾಮದಲ್ಲಿ ಶನಿವಾರ ಹಾಡುಹಗಲೇ ನಡೆದಿದ್ದ ಕಳವು ಪ್ರಕರಣವನ್ನು ಪೊಲೀಸರು ತ್ವರಿತವಾಗಿ ಪತ್ತೆಹಚ್ಚಿದ್ದಾರೆ. ಮನೆಯ ಸೊಸೆ ಅಮೃತಾ, ಕೆ.ಹಿರೀಹಳ್ಳಿ ಗ್ರಾಮದ ತನ್ನ ಪ್ರಿಯಕರ ಪರಮೇಶ್ ಅಲಿಯಾಸ್ ಚೇತನ್ ಜೊತೆ ಸೇರಿ ಕಳ್ಳತನ ನಡೆಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ದೊಡ್ಡಹೊನ್ನೇನಹಳ್ಳಿ ಗ್ರಾಮದ ಕೇಶವೇಗೌಡ-ಜಯಲಕ್ಷ್ಮೀ ದಂಪತಿಯ ಪುತ್ರ ವೇಣುಗೋಪಾಲ್‌ಗೆ ಕಳೆದ ಹತ್ತು ವರ್ಷಗಳ ಹಿಂದೆ ಕೆ.ಹಿರೀಹಳ್ಳಿ ಗ್ರಾಮದ ಅಮೃತಾ ಜೊತೆ ವಿವಾಹ ಮಾಡಲಾಗಿತ್ತು. ದಂಪತಿಗೆ ಇಬ್ಬರು ಮಕ್ಕಳಿದ್ದು ಪತಿ ಮನೆಯಲ್ಲಿ ವಾಸವಿದ್ದರು. ವೇಣುಗೋಪಾಲ್ ಸಹೋದರಿಯರಾದ ರೇಣುಕಾ ಹಾಗು ಪೂರ್ಣಿಮಾ ತಮ್ಮ ಹಾಗು ಪತಿ ಹಾಗೂ ಮೊಮ್ಮಕ್ಕಳಿಗೆ ಸೇರಿದ ಚಿನ್ನಾಭರಣಗಳನ್ನು ತಂದೆಯ ಮನೆಯಲ್ಲಿ ಇಡುತ್ತಿದ್ದರು. ಯಾವುದಾದರೂ ಸಮಾರಂಭಗಳಿದ್ದರೆ ತವರು ಮನೆಯಿಂದ ಒಡವೆಗಳನ್ನು ತೆಗೆದುಕೊಂಡು ಹೋಗಿ ವಾಪಾಸ್ ಪೋಷಕರ ಮನೆಯಲ್ಲಿಯೇ ಇಡುತ್ತಿದ್ದರು. ಬೀರುವಿನ ಲಾಕರ್‌ಗೆ ಎರಡು ಕೀಗಳಲ್ಲಿದ್ದು ಅದರಲ್ಲಿ ಒಂದು ಕೀ ಕೇಶವೇಗೌಡರ ಬಳಿ ಮತ್ತೊಂದು ಕೀ ಜಯಲಕ್ಷ್ಮಿ ಅವರ ಬಳಿ ಇತ್ತು. ಆದರೆ ಜಯಲಕ್ಷ್ಮಿ ಅವರ ಬಳಿ ಕೀ ಇರುವ ವಿಚಾರ ಯಾರಿಗೂ ತಿಳಿದಿರಲಿಲ್ಲ.

ಶನಿವಾರ ಬೆಳಿಗ್ಗೆ ಕೇಶವೇಗೌಡ, ಪತ್ನಿ ಜಯಲಕ್ಷ್ಮೀ ಹಾಗೂ ಮಗ ವೇಣುಗೋಪಾಲ್ ಜಮೀನಿನ ಬಳಿ ಕೆಲಸಕ್ಕೆ ತೆರಳಿದ್ದರು. ಸೊಸೆ ಅಮೃತಾ ಮಗನನ್ನು ಶಾಲಾ ಬಸ್ ಹತ್ತಿಸಿ ಮನೆಗೆ ಬಂದಿದ್ದರು. ಮನೆಯಲ್ಲಿ ಯಾರು ಇಲ್ಲದ ಸಮಯ ಹಾಗು ಪತಿ, ಅತ್ತೆ, ಮಾವ ಬರುವ ಸಮಯವನ್ನು ಖಚಿತ ಪಡಿಸಿಕೊಂಡು ತನ್ನ ಪ್ರಿಯತಮ ಪರಮೇಶ್‌ನನ್ನು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಮನೆಯ ಬಳಿ ಬರಲು ಹೇಳಿ, ಬೀರುವಿನ ಲಾಕ್ ಒಡೆದು ಚಿನ್ನಾಭರಣ ಹಾಗು ಹಣವನ್ನು ಕೊಟ್ಟು ಕಳುಹಿಸಿದ್ದಾರೆ.

ಆನಂತರ ಕೊಟ್ಟಿಗೆಗೆ ಬೀಗ ಹಾಕಿ, ಮುಂಬಾಗಿಲು ತೆರೆದು ಜಮೀನಿನ ಬಳಿ ತೆರಳಿದ್ದಾರೆ. ಕೇಶವೇ ಗೌಡ


» ನಾಲ್ಕನೇ ಪುಟದಲ್ಲಿ



## ರಾಷ್ಟ್ರೀಯ ಹೆದ್ದಾರಿಗೆ ಸಾಯಿಲ್ ನೈಲಿಂಗ್ ಕವಚ

### ಭೂಕುಸಿತ ತಡೆಗೆ 40 ಕೋ. ರೂ. ವೆಚ್ಚದ ಯೋಜನೆ | ಸುರಕ್ಷಿತ ಸಂಚಾರಕ್ಕೆ ಆದ್ಯತೆ

• ಪ್ರಜೋದಯ ವರದಿ

**ಸಕಲೇಶಪುರ:** ಮಳೆಗಾಲದಲ್ಲಿ ಭೂಕುಸಿತದಿಂದ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗುತ್ತಿದ್ದ ಬೆಂಗಳೂರು- ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಘಾಟ್‌ನಲ್ಲಿ ಭೂಕುಸಿತಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ) ಸಾಯಿಲ್ ನೈಲಿಂಗ್ ಹಾಗು ಹೈಡ್ರೋ ಮಲ್ಚಿಂಗ್ ತಂತ್ರಜ್ಞಾನ ಬಳಸಿ ಕಾಮಗಾರಿ ಆರಂಭಿಸಿದೆ.

ಸಕಲೇಶಪುರದಿಂದ ದಕ್ಷಿಣ ಕನ್ನಡ ಜಿಲ್ಲೆಯ ಗುಂಡ್ಯವರೆಗೆ ವ್ಯಾಪಿಸಿರುವ ಶಿರಾಡಿ ಘಾಟ್‌ನಲ್ಲಿ ಕಳೆದ ಹಲವು ವರ್ಷಗಳಿಂದ ಮಳೆಗಾಲದಲ್ಲಿ ಭೂಕುಸಿತ ಮರುಕಳಿಸುತ್ತಿದ್ದು, ವಾಹನ ಸಂಚಾರ ಪದೇ ಪದೇ ಸ್ಥಗಿತ ಗೊಳ್ಳುತ್ತಿತ್ತು. ಈ ಹಿನ್ನಲೆಯಲ್ಲಿ ಅಪಾಯದ ಪ್ರದೇಶಗಳಲ್ಲಿ ಸುಮಾರು 40 ಕೋ. ರೂ. ವೆಚ್ಚದಲ್ಲಿ ವೈಜ್ಞಾನಿಕ ಕಾಮಗಾರಿ ಕೈಗೊಳ್ಳಲಾಗಿದೆ.



**ಏನಿದು ಸಾಯಿಲ್ ನೈಲಿಂಗ್**

ಭೂಕುಸಿತ ಸಂಭವಿಸುವ ಸಾಧ್ಯತೆ ಇರುವ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ಸುಮಾರು 12 ಮೀಟರ್ (36 ಅಡಿ) ಆಳದ ರಂಧ್ರಗಳನ್ನು ಕೊರೆಯಲಾಗುತ್ತದೆ. ಎರಡು ಅಡಿ ಅಂತರದಲ್ಲಿ ರಂಧ್ರಗಳನ್ನು ನಿರ್ಮಿಸಿ ಸುಮಾರು 37 ಅಡಿ ಉದ್ದದ ಕಬ್ಬಿಣದ ಸರಳುಗಳನ್ನು ಅಳವಡಿಸಲಾಗುತ್ತದೆ. ಬಳಿಕ ಅವುಗಳನ್ನು ಸಿಮೆಂಟ್‌ನಿಂದ ಭದ್ರಪಡಿಸಿ ಕಬ್ಬಿಣದ ಜಾಲರಿ ಅಳವಡಿಸಲಾಗುತ್ತದೆ. ಅದರ ಮೇಲೆ ಹೈಡ್ರೋ ಮಲ್ಚಿಂಗ್ ತಂತ್ರಜ್ಞಾನದ ಮೂಲಕ ಹುಲ್ಲಿನ ಬೀಜಗಳನ್ನು ಬಿತ್ತನೆ ಮಾಡಿ, ಗುಡ್ಡದ ಮೇಲ್ಮೈಯಲ್ಲಿ ಹುಲ್ಲು ಬೆಳೆಯುವಂತೆ ಮಾಡಲಾಗುತ್ತದೆ. ಅದರಿಂದ ಮಣ್ಣಿನ ಸವೆತ ಕಡಿಮೆ ಯಾಗಿ ಭೂಕುಸಿತ ತಡೆಯಲು ನೆರವಾಗಲಿದೆ.

**ಭೂಕುಸಿತಕ್ಕೆ ಕಾರಣವೇನು ?**

ಸಕಲೇಶಪುರ-ಮಾರನಹಳ್ಳಿ ಚತುಷ್ಪಥ ರಸ್ತೆ ನಿರ್ಮಾಣದ ವೇಳೆ ಗುಡ್ಡಗಳನ್ನು ವ್ಯಾಪಕವಾಗಿ ಕತ್ತರಿಸಿರುವುದು ಹಾಗು ಪಶ್ಚಿಮಘಟ್ಟ ಪ್ರದೇಶದ ಮೆದುವಾದ ಮಣ್ಣಿನ ಸ್ವಭಾವದಿಂದ ಮಳೆಗಾಲದಲ್ಲಿ ಮಣ್ಣು ಸಡಿಲಗೊಂಡು ಭೂಕುಸಿತ ಸಂಭವಿಸುತ್ತಿದೆ. ಅದನ್ನು ನಿಯಂತ್ರಿಸಲು ಈ ಹೊಸ ತಾಂತ್ರಿಕ ವಿಧಾನ ಅಳವಡಿಸಲಾಗಿದೆ.

**ಹತ್ತಕ್ಕೂ ಹೆಚ್ಚು ಕಡೆ ಕಾಮಗಾರಿ**

ಕಪ್ಪಳ್ಳಿ, ದೊಡ್ಡತಪ್ಪ, ಹೆಗ್ಗದ್ದೆ ಸೇರಿ ಸಕಲೇಶಪುರ-ಮಾರನಹಳ್ಳಿ ನಡುವಿನ ಹತ್ತಕ್ಕೂ ಹೆಚ್ಚು ಭೂಕುಸಿತ ಪ್ರದೇಶಗಳಲ್ಲಿ ಕಾಮಗಾರಿ ನಡೆಯುತ್ತಿದೆ. ಈ ಯೋಜನೆ ಯಶಸ್ವಿಯಾದರೆ ಶಿರಾಡಿ ಘಾಟ್‌ನಲ್ಲಿ ಮಳೆಗಾಲದ ಭೂಕುಸಿತದ ಆತಂಕ ಗಣನೀಯವಾಗಿ ಕಡಿಮೆಯಾಗುವ ನಿರೀಕ್ಷೆ ಇದೆ.

ಶಿರಾಡಿಘಾಟ್ ಮಾರ್ಗವು ದಕ್ಷಿಣ ಕನ್ನಡ, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ಸೇರಿ ಕರಾವಳಿ ಭಾಗದ ಪ್ರಮುಖ ಧಾರ್ಮಿಕ ಹಾಗು ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಈ ಕಾಮಗಾರಿಯಿಂದ ಸಾವಿರಾರು ವಾಹನ ಸವಾರರಿಗೆ ಸುರಕ್ಷಿತ ಹಾಗು ನಿರಾಳ ಸಂಚಾರ ಸಾಧ್ಯವಾಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ದಶಕಗಳಿಂದ ಕುಂಟುತ್ತಾ ಸಾಗುತ್ತಿದೆ ಎಂಬ ಆರೋಪಗಳು ಕೇಳುತ್ತಲೇ ಇವೆ. ಗುತ್ತಿಗೆದಾರರ ನಿರ್ಲಕ್ಷ್ಯ ಹಾಗು ಮಳೆ ಹಿನ್ನಲೆಯಲ್ಲಿ ಕೆಲಸಕ್ಕೆ ವೇಗ ಸಿಕ್ಕಿರಲಿಲ್ಲ. ಆದರೆ ಕಳೆದ ಎರಡ್ಮೂರು ವರ್ಷಗಳಿಂದ ಕಾಮಗಾರಿಗೂ ವೇಗ ದೊರೆತಿದ್ದು ಶೀಘ್ರದಲ್ಲೇ ಕಾಮಗಾರಿ ಸಂಪೂರ್ಣ ಮುಗಿಯುವ ಭರವಸೆ ಸಿಕ್ಕಿದೆ. ರಾಜಧಾನಿ ಬೆಂಗಳೂರಿನಿಂದ ಬಂದರು ನಾಡು ಮಂಗಳೂರಿಗೆ ಸಂಪರ್ಕಿಸುವ ರಸ್ತೆ ಭೂಕುಸಿತದಿಂದ ಅನೇಕ ತೊಂದರೆಗಳು ಎದುರಾಗುತ್ತಲೇ ಇವೆ. ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ನೂತನ ಕ್ರಮಕ್ಕೆ ಮುಂದಾಗಿದ್ದು ಹೊಸ ಆಶಾಭಾವ ಮೂಡಿಸಿದೆ.

## ಬೇಲೂರು ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿ

### ರೈತ ಸಂಘ ಆಗ್ರಹ | ತಾಲ್ಲೂಕು ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನಲ್ಲಿ ತೀವ್ರ ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರ ಯಾವುದೇ ವಿಳಂಬ ಮಾಡದೆ ಬೇಲೂರು ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ ರೈತರಿಗೆ ಸೂಕ್ತ ನೆರವು ನೀಡಬೇಕೆಂದು ಒತ್ತಾಯಿಸಿ ರೈತ ಸಂಘದ ನೇತೃತ್ವದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಯಿತು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ರೈತರು ಅಲ್ಲಿಂದ ತಾಲ್ಲೂಕು ಕಚೇರಿವರೆಗೆ ಮೆರವಣಿಗೆ ನಡೆಸಿ, ಬಳಿಕ ಕಚೇರಿ ಆವರಣದಲ್ಲಿ ಧರಣಿ ಆರಂಭಿಸಿದರು. ಸರ್ಕಾರ ಬೇಡಿಕೆಗಳನ್ನು ಈಡೇರಿಸುವವರೆಗೆ ಅನಿರ್ದಿಷ್ಟಾವಧಿ ಮುಷ್ಕರ ಮುಂದುವರಿಸುವುದಾಗಿ ರೈತ ಸಂಘದ ಮುಖಂಡರು ಪಟ್ಟು ಹಿಡಿದಿದ್ದಾರೆ.



ರೈತ ಸಂಘದ ತಾಲ್ಲೂಕು ಅಧ್ಯಕ್ಷ ಭೋಗಮಲ್ಲೇಶ್ ಅವರು ಮಾತನಾಡಿ, ಜೋಳದ ಬೆಳೆಯಲ್ಲಿ ಕಾಣಿಸಿಕೊಂಡಿರುವ ಬಿಳಿಸುಳಿ ರೋಗದಿಂದ ನಷ್ಟ ಅನುಭವಿಸಿರುವ ರೈತರಿಗೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಸರ್ಕಾರ ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಿ ಎಲ್ಲಾ ರೈತರಿಗೂ ನೆರವು ಒದಗಿಸುವಂತೆ ಆಗ್ರಹಿಸಿದರು.

ಏತ ನೀರಾವರಿ ಯೋಜನೆಯ ನೀರನ್ನು ಸಮರ್ಪಕವಾಗಿ ಬಳಕೆ ಮಾಡುವಂತೆ ಹಾಗು ಹೂಳೆತ್ತುವ ಕಾಮಗಾರಿಯನ್ನು ತಕ್ಷಣ ಕೈಗೆತ್ತಿಕೊಳ್ಳುವಂತೆ ಸರ್ಕಾರವನ್ನು ಆಗ್ರಹಿಸಿದ ಅವರು, ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಆನೆ-ಮಾನವ ಸಂಘರ್ಷವನ್ನು ತಡೆಗಟ್ಟಲು ಕಾಡಾನೆಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಬೇಕೆಂದು ಒತ್ತಾಯಿಸಿದರು.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ


» ನಾಲ್ಕನೇ ಪುಟದಲ್ಲಿ


## ಕಾಡಾನೆ ದಾಳಿ: ರೈತನ ಕಾಲು ಮುರಿತ

**ಸಕಲೇಶಪುರ:** ಕಾಡಾನೆ ದಾಳಿ ನಡೆಸಿದ ಪರಿಣಾಮ ರೈತ ಗಂಭೀರವಾಗಿ ಗಾಯಗೊಂಡ ಘಟನೆ ತಾಲ್ಲೂಕಿನ ಶಾಂತಪುರ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದಿದೆ. ಶಾಂತಪುರ ಗ್ರಾಮದ ಮಲ್ಲೇಶ್ (54) ಗಾಯಾಳು.



ಸಂಜೆ ದನಗಳನ್ನು ಮನೆಗೆ ಹೊಡೆದುಕೊಂಡು ಬರುತ್ತಿದ್ದಾಗ ಏಕಾಏಕಿ ಒಂಟಿ ಕಾಡಾನೆ ದಾಳಿ ನಡೆಸಿದೆ. ಕಾಡಾನೆ ಬಲಗಾಲು ತುಳಿದ ಪರಿಣಾಮ ಕಾಲಿನ ಮೂಳೆ ಮುರಿದು ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ವಲಯ ಅರಣ್ಯಾಧಿಕಾರಿ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿದರು.

## ಸಮರ್ಪಕ ವಿದ್ಯುತ್ ಪೂರೈಕೆಗೆ ನಿರ್ದೇಶನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಳೆ ಅಭಾವದಿಂದ ಬೆಳೆ ಒಣಗುತ್ತಿರುವ ಆತಂಕದಲ್ಲಿ ರೈತರಿದ್ದು ಸಮರ್ಪಕ ವಿದ್ಯುತ್ ಪೂರೈಸುವ ಮೂಲಕ ಸೆಸ್ಕಾಂ ನೆರವಾಗಬೇಕೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ನಿರ್ದೇಶನ ನೀಡಿದರು.

ಪಟ್ಟಣದ ಸೆಸ್ಕಾಂ ಕಚೇರಿಯಲ್ಲಿ ಸೋಮವಾರ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಉಂಟಾಗಿರುವ ವಿದ್ಯುತ್ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಬೇಕು. ರೈತರು ಹಾಗು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದರು.



ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು, ತಕ್ಷಣ ಸ್ಪಂದಿಸಬೇಕು. ಕೃಷಿ ಚಟುವಟಿಕೆಗಳಿಗೆ ನಿರಂತರ ವಿದ್ಯುತ್ ಪೂರೈಕೆ ಆಗುವಂತೆ ನೋಡಿಕೊಳ್ಳಬೇಕು. ಸಿಬ್ಬಂದಿ ಕೊರತೆಯಿಂದ ವಿದ್ಯುತ್ ದುರಸ್ತಿ ಕಾರ್ಯ ವಿಳಂಬವಾಗುತ್ತಿರುವ ಬಗ್ಗೆ ಅಧಿಕಾರಿಗಳು ಗಮನಹರಿಸಬೇಕು. ಇಲಾಖೆಯಲ್ಲಿ ಖಾಲಿ ಇರುವ ಲೈನ್‌ಮ್ಯಾನ್ ಹುದ್ದೆ ಶೀಘ್ರ ಭರ್ತಿ ಮಾಡುವಂತೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದೆಂದರು.

ಮಳೆ ಕೊರತೆಯಿಂದ ರೈತರು ಸಂಕಷ್ಟದಲ್ಲಿದ್ದು, ಬೆಳೆಗಳನ್ನು ಉಳಿಸಿಕೊಳ್ಳಲು ನೀರಾವರಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಅತ್ಯಗತ್ಯವಾಗಿದೆ. ರೈತರಿಗೆ ಸಮಯಕ್ಕೆ ಸರಿಯಾಗಿ ವಿದ್ಯುತ್ ನೀಡದಿದ್ದರೆ ಬೆಳೆ ಉಳಿಸಿಕೊಳ್ಳುವುದು ಕಷ್ಟವಾಗಲಿದೆ ಎಂದು ಅಧಿಕಾರಿಗಳ ಗಮನಕ್ಕೆ ತಂದರು.


» ನಾಲ್ಕನೇ ಪುಟದಲ್ಲಿ


## ನಗರದಲ್ಲಿ ಮುಂದುವರಿದ ಒತ್ತುವರಿ ತೆರವು



• ಪ್ರಜೋದಯ ವರದಿ

**ಹಾಸನ:** ತಿಂಗಳಿನಿಂದ ನಗರದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿದಿದ್ದು, ಸೋಮವಾರ ಸಹ ಮಹಾನಗರ ಪಾಲಿಕೆ ಸಿಬ್ಬಂದಿ ಕಾರ್ಯಪ್ರವೃತ್ತರಾದರು.

ಬಿ.ಎಂ. ರಸ್ತೆಯುದ್ದಕ್ಕೂ ಫುಟ್‌ಪಾತ್ ಮೇಲೆ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಗೂಡಂಗಡಿ, ತಾತ್ಕಾಲಿಕ ವ್ಯಾಪಾರ ಮಳಿಗೆ, ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗಿದ್ದ ವಿವಿಧ ವಸ್ತು ಹಾಗು ರಾಜಕೀಯ ಪಕ್ಷಗಳ ಕಟೌಟ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು.

ಬೆಳಿಗ್ಗೆಯಿಂದಲೇ ಕಾರ್ಯಾಚರಣೆಗೆ ಇಳಿದ ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗು ಸಿಬ್ಬಂದಿ, ಪೊಲೀಸ್ ಇಲಾಖೆಯ ಸಹಕಾರ ದೊಂದಿಗೆ ರಸ್ತೆ ಬದಿಯ ಒತ್ತುವರಿ ಗಳನ್ನು ತೆರವುಗೊಳಿಸಿದರು. ಕಾರ್ಯಾಚರಣೆ ವೇಳೆ ಕೆಲ ವ್ಯಾಪಾರಿಗಳು ಅಸಮಾಧಾನ ವ್ಯಕ್ತ ಪಡಿಸಿದರೂ ಅಧಿಕಾರಿಗಳು ನಿಯಮಾನುಸಾರ ಕ್ರಮ ಮುಂದುವರಿಸಿದರು. ಅದರಿಂದ ಕೆಲಕಾಲ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣ ವಾದರೂ ಯಾವುದೇ ಅಹಿತಕರ ಘಟನೆ ಸಂಭವಿಸಲಿಲ್ಲ.


» ನಾಲ್ಕನೇ ಪುಟದಲ್ಲಿ


### 20 ವರ್ಷಗಳಿಂದ ಅರ್ಧಕ್ಕೆ ನಿಂತ ಕಾಮಗಾರಿ | 70 ಲ.ರೂ. ಅನುದಾನ ವಾಪಾಸ್

## ಇಲಾಖೆಗಳ ತಿಕ್ಕಾಟಕ್ಕೆ ಬಲಿಯಾದ ವಾಚಿಂಗ್ ಟವರ್

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ದೇಶ-ವಿದೇಶದ ಪ್ರವಾಸಿಗರಿಗೆ ಪರಿಚಯಿಸುವ ಮಹತ್ವಾಕಾಂಕ್ಷೆಯ ಯೋಜನೆಯೊಂದು ಎರಡು ದಶಕಗಳಿಂದ ಇಲಾಖೆಗಳ ನಡುವಿನ ಸಮನ್ವಯದ ಕೊರತೆಗೆ ಬಲಿಯಾಗಿದೆ.

ಸಕಲೇಶಪುರ ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇವಾಲಯ ಸಮೀಪ ನಿರ್ಮಾಣವಾಗಬೇಕಿದ್ದ ವಾಚಿಂಗ್ ಟವರ್ ಇಂದಿಗೂ ಅಪೂರ್ಣವಾಗಿಯೇ ಉಳಿದಿದೆ. ಇದರಿಂದ ಪ್ರಕೃತಿ ವೀಕ್ಷಣೆಗೆ ಸೂಕ್ತವಾದ ವೀವ್ ಪಾಯಿಂಟ್ ಅಭಿವೃದ್ಧಿಯಾಗದೆ, ಪ್ರವಾಸೋದ್ಯಮದ ಬೆಳವಣಿಗೆಗೂ ಹಿನ್ನಡೆಯಾಗಿದೆ.

ಸಕಲೇಶಪುರ, ಆಲೂರು ಹಾಗು ಬೇಲೂರು ತಾಲ್ಲೂಕುಗಳು ಮಲೆನಾಡಿನ ಪ್ರಸಿದ್ಧ ಪ್ರವಾಸಿ ತಾಣಗಳಾಗಿದ್ದು, ವಿಶೇಷವಾಗಿ ಮಳೆಗಾಲದಲ್ಲಿ ಸಾವಿರಾರು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ. ಆದರೆ, ಬಿಸಿಲೆ ವೀವ್ ಪಾಯಿಂಟ್ ಹೊರತುಪಡಿಸಿ ಪ್ರವಾಸಿಗರು ಸುರಕ್ಷಿತವಾಗಿ ನಿಂತು ಪ್ರಕೃತಿ ಸೌಂದರ್ಯ ಸವಿಯಲು ಅನುಕೂಲವಾಗುವ ಮತ್ತೊಂದು ವೀಕ್ಷಣಾ ತಾಣ ಇಲ್ಲದಿರುವುದು ಪ್ರಮುಖ ಕೊರತೆಯಾಗಿದೆ.



**ಎರಡು ದಶಕದ ಹಿಂದೆಯೇ ನಿರ್ಮಾಣಕ್ಕೆ ಚಾಲನೆ**

ಸಕಲೇಶಪುರ ತಾಲ್ಲೂಕಿನ ಮರಗುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಟ್ಟದ ಭೈರವೇಶ್ವರ ದೇವಾಲಯಕ್ಕೆ ಪ್ರತಿನಿತ್ಯ ರಾಜ್ಯ ಹಾಗು ಹೊರರಾಜ್ಯಗಳಿಂದ ಸಾವಿರಾರು ಭಕ್ತರು ಮತ್ತು ಪ್ರವಾಸಿಗರು ಭೇಟಿ ನೀಡುತ್ತಾರೆ. ಈ ದೇವಾಲಯದಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿರುವ ಗುಡ್ಡದ ತುದಿಯಲ್ಲಿ ಸುಮಾರು 20 ವರ್ಷಗಳ ಹಿಂದೆ ವಾಚಿಂಗ್ ಟವರ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು. ಆದರೆ, ಕಾಮಗಾರಿ ಆರಂಭವಾದ ಕೆಲವೇ ದಿನಗಳಲ್ಲಿ ಸ್ಥಗಿತಗೊಂಡಿದ್ದು, ಇಂದಿಗೂ ಪುನರಾರಂಭವಾಗಿಲ್ಲ.

**ಜಂಟಿ ಸರ್ವೆ ನಡೆಸದೆ ನಿರ್ಲಕ್ಷ್ಯ**

ಅರಣ್ಯ ಮತ್ತು ಪ್ರವಾಸೋದ್ಯಮ ಇಲಾಖೆಗಳು ಜಂಟಿ ಸರ್ವೆ ನಡೆಸಿ ಯೋಜನೆಗೆ ಅಂತಿಮ ರೂಪ ನೀಡಿದರೆ ವಾಚಿಂಗ್ ಟವರ್ ಕಾಮಗಾರಿ ಪೂರ್ಣಗೊಳ್ಳುವುದರ ಜೊತೆಗೆ ಮಲೆನಾಡಿಗೆ ಮತ್ತೊಂದು ಆಕರ್ಷಕ ಪ್ರವಾಸಿ ತಾಣ ದೊರೆಯಲಿದೆ. ಇದರಿಂದ ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ಸಿಗುವುದರ ಜೊತೆಗೆ ಸರ್ಕಾರಕ್ಕೂ ಪ್ರವಾಸೋದ್ಯಮದಿಂದ ಹೆಚ್ಚುವರಿ ಆದಾಯವೂ ಲಭಿಸುವಂತಾಗುತ್ತದೆ.

**70 ಲ.ರೂ. ಅನುದಾನ ವಾಪಾಸ್**

ಅಂದಿನ ಜಿಲ್ಲಾಧಿಕಾರಿ ಅಶ್ವತ್ಥನಾರಾಯಣ ಗೌಡ ಅವರ ಅವಧಿಯಲ್ಲಿ ವಾಚಿಂಗ್ ಟವರ್ ನಿರ್ಮಾಣಕ್ಕಾಗಿ 25 ಎಕರೆ ಅರಣ್ಯ ಭೂಮಿಯನ್ನು ಮಂಜೂರು ಮಾಡಲಾಗಿತ್ತು. ಯೋಜನೆಗೆ ಸರ್ಕಾರ 70 ಲ.ರೂ. ಅನುದಾನವೂ ಬಿಡುಗಡೆ ಮಾಡಿತ್ತು. ಆದರೆ, ಈ ಪ್ರದೇಶವು ಮೀಸಲು ಅರಣ್ಯ (ಸೆಕ್ಷನ್-4) ವ್ಯಾಪ್ತಿಗೆ ಸೇರಿದ ಕಾರಣ, ಅರಣ್ಯ ಮತ್ತು ಪ್ರವಾಸೋದ್ಯಮ ಇಲಾಖೆಗಳು ಜಂಟಿಯಾಗಿ ಸರ್ವೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಬೇಕಿತ್ತು. ಜಂಟಿ ಸರ್ವೆ ಪೂರ್ಣಗೊಳ್ಳುವ ಮುನ್ನವೇ ಪ್ರವಾಸೋದ್ಯಮ ಇಲಾಖೆ ಕಾಮಗಾರಿ ಆರಂಭಿಸಿದ್ದಕ್ಕೆ ಅರಣ್ಯ ಇಲಾಖೆ ಆಕ್ಷೇಪ ವ್ಯಕ್ತಪಡಿಸಿತು. ಪರಿಣಾಮ, ಕಾಮಗಾರಿ ಸ್ಥಗಿತಗೊಂಡಿತು. ಬಿಡುಗಡೆಯಾಗಿದ್ದ 70 ಲ.ರೂ.


» ನಾಲ್ಕನೇ ಪುಟದಲ್ಲಿ



CMYK CMYK CMYK CMYK

# ವಿದ್ಯಾರ್ಥಿಗಳ ಹೋರಾಟ, ಕ್ರಾಂತಿ ಮತ್ತು ಪ್ರಜಾಪ್ರಭುತ್ವ

ಜನಜಾಗೃತಿ ರಾಜಕೀಯ ಕ್ರಾಂತಿಗಳು ಏಕಾಏಕಿ ಬೀದಿಗಳಲ್ಲಿ ಭುಗಿಲೇಳುವ ವಿದ್ಯಮಾನಗಳಲ್ಲ. ಅವಕ್ಕೆ ಬಹಳ ಹಿಂದೆಯೇ ತರಗತಿಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ, ಸಾಂಸ್ಕೃತಿಕ ಸಂಸ್ಥೆಗಳಲ್ಲಿ, ಮಾಧ್ಯಮಗಳಲ್ಲಿ ಹಾಗೂ ಬೌದ್ಧಿಕ ವಲಯಗಳಲ್ಲಿ ವಿಚಾರಗಳು ಮೊಳಕೆಯೊಡೆದು, ಚರ್ಚೆಗೊಳಗಾಗಿ, ಅಂತಿಮವಾಗಿ ರಾಜಕೀಯ ಚಳುವಳಿಗಳಾಗಿ ರೂಪಾಂತರಗೊಳ್ಳುತ್ತವೆ. ಇತಿಹಾಸವನ್ನು ಗಮನಿಸಿದರೆ, ದೊಡ್ಡ ಸಾಮಾಜಿಕ ಹಾಗೂ ರಾಜಕೀಯ ಪಲ್ಲಟಗಳು ರಾತ್ರೋರಾತ್ರಿ ಸಂಭವಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸಮಾಜವು ತನ್ನ ಇತಿಹಾಸ, ಅಸ್ಮಿತೆ, ಸಾಂಸ್ಥಿಕ ವ್ಯವಸ್ಥೆ ಹಾಗೂ ಭವಿಷ್ಯವನ್ನು ಗ್ರಹಿಸುವ ರೀತಿಯನ್ನು ನಿಧಾನವಾಗಿ ಮರುರೂಪಿಸುವ ದಶಕಗಳ ಕಾಲದ ಸೈದ್ಧಾಂತಿಕ ಬದಲಾವಣೆಗಳು ಇಂತಹ ಕ್ರಾಂತಿಗಳಿಗೆ ಮುನ್ನುಡಿ ಬರೆದಿರುತ್ತವೆ.

ಆಧುನಿಕ ಸೈದ್ಧಾಂತಿಕ ಹೋರಾಟವು ಕೇವಲ ಹಿಂಸಾತ್ಮಕ ವರ್ಗಸಂಘರ್ಷಕ್ಕೆ ಸೀಮಿತವಾಗಿಲ್ಲ; ಬದಲಾಗಿ ಅದು ಸಂಸ್ಕೃತಿ, ಶಿಕ್ಷಣ, ಮಾಧ್ಯಮ ಮತ್ತು ಸಾರ್ವಜನಿಕ ಸಂವಾದಗಳ ಮೇಲೆ ಪ್ರಭಾವ ಬೀರುವತ್ತ ಮುಖ ಮಾಡಿದೆ. ಕೇವಲ ಚುನಾವಣೆಗಳನ್ನು ಗೆಲ್ಲುವುದು ಅಥವಾ ಸರಕಾರಗಳನ್ನು ಉರುಳಿಸುವುದು ಇದರ ಉದ್ದೇಶವಲ್ಲ; ಬದಲಾಗಿ ಸಮಾಜದ ನೈತಿಕ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಅಡಿಪಾಯವನ್ನೇ ಮರು ರೂಪಿಸುವುದು ಇದರ ಮೂಲ ಆಶಯ. ಈ ವಿಶ್ಲೇಷಣೆಯನ್ನು ಒಪ್ಪಲಿ ಅಥವಾ ಬಿಡಲಿ, ಜಗತ್ತಿನಾದ್ಯಂತ ನಡೆಯುತ್ತಿರುವ ರಾಜಕೀಯ ಚರ್ಚೆಗಳಲ್ಲಿ ಇದೊಂದು ಪ್ರಭಾವಶಾಲಿ ಚೌಕಟ್ಟಾಗಿ ಹೊರಹೊಮ್ಮಿರುವುದಂತೂ ಸತ್ಯ.

ಬಂಡವಾಳಶಾಹಿ ಮತ್ತು ಕಮ್ಯುನಿಸಂ ನಡುವಿನ ಸಾಂಪ್ರದಾಯಿಕ ವೈರತ್ವವನ್ನು ಬಹುತೇಕರು ತಪ್ಪಾಗಿ ಗ್ರಹಿಸಿದ್ದಾರೆ. ಇವೆರಡೂ ಪರಸ್ಪರ ವಿರುದ್ಧವಾದ ಆರ್ಥಿಕ ವ್ಯವಸ್ಥೆಗಳಂತೆ ಕಂಡರೂ, ವಾಸ್ತವದಲ್ಲಿ ಇವೆರಡೂ ಅಧಿಕಾರವನ್ನು ಕೇಂದ್ರೀಕರಿಸುವ ಸಾಧನಗಳೇ ಆಗಿವೆ. ಬಂಡವಾಳ ಶಾಹಿಯು ಹಣಕಾಸು, ಮಾರುಕಟ್ಟೆ ಮತ್ತು ಆರ್ಥಿಕ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಿದರೆ, ಕಮ್ಯುನಿಸಂ ಸಮಾಜದ ಸಂಸ್ಕೃತಿ, ಶಿಕ್ಷಣ ಮತ್ತು ಸಾಮಾಜಿಕ ಮೌಲ್ಯಗಳನ್ನು ನಿಯಂತ್ರಿಸಲು ಹವಣಿಸುತ್ತದೆ. ಈ ಹಿನ್ನೆಲೆಯಲ್ಲಿ, ಚುನಾವಣಾ ವಿಜಯಗಳಿಗಿಂತ ಸಾಂಸ್ಥಿಕ ವ್ಯವಸ್ಥೆಗಳ ಮೇಲಿನ ಸೈದ್ಧಾಂತಿಕ ಹಿಡಿತವು ಅತ್ಯಂತ ನಿರ್ಣಾಯಕವಾಗುತ್ತದೆ; ಏಕೆಂದರೆ ಸರಕಾರಗಳು ಬದಲಾದ ದೀರ್ಘಕಾಲದವರೆಗೂ ಸಂಸ್ಥೆಗಳು ಭವಿಷ್ಯದ ತಲೆಮಾರುಗಳನ್ನು ಮುನ್ನಡೆಸುತ್ತವೆ.

ಈ ಸೈದ್ಧಾಂತಿಕ ರೂಪಾಂತರದ ಮೊದಲ ಹಂತ ವಿಶ್ವವಿದ್ಯಾಲಯಗಳಲ್ಲಿ ಆರಂಭವಾಗುತ್ತದೆ. ರಾಜಕೀಯ ಚಿಂತನೆ ಮತ್ತು ಸಾಮಾಜಿಕ ಚಳುವಳಿಗಳನ್ನು ರೂಪಿಸುವಲ್ಲಿ



ಶೈಕ್ಷಣಿಕ ವಲಯ ಸದಾ ಮುಂಚೂಣಿಯಲ್ಲಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಸಂಸ್ಥೆಗಳು ಇತಿಹಾಸ, ಧರ್ಮ ಮತ್ತು ರಾಷ್ಟ್ರೀಯ ಅಸ್ಮಿತೆಯನ್ನು ಮರುವ್ಯಾಖ್ಯಾನಿಸುವ ಮೂಲಕ, ವಿದ್ಯಾರ್ಥಿಗಳು ತಮ್ಮದೇ ಸಾಂಪ್ರದಾಯಿಕ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರಶ್ನಿಸುವಂತೆ ಅಥವಾ ಸಂಪೂರ್ಣವಾಗಿ ತಿರಸ್ಕರಿಸುವಂತೆ ಪ್ರೇರೇಪಿಸುತ್ತಿವೆ. ಈ ನಿಧಾನ ಗತಿಯ ಪ್ರಕ್ರಿಯೆಯು ನಾಗರಿಕತೆಯ ಬಗೆಗಿನ ನಮ್ಮ ವಿಶ್ವಾಸವನ್ನು ಕುಗ್ಗಿಸಿ, ನಮ್ಮದೇ ಬೇರುಗಳ ಬಗ್ಗೆ ಪರಕೀಯತೆಯನ್ನು ಸೃಷ್ಟಿಸುತ್ತದೆ. ಕಾಲಾ ನಂತರದಲ್ಲಿ, ಯುವಜನತೆ ಸ್ಥಾಪಿತ ವ್ಯವಸ್ಥೆಗಳ ಮೇಲಿನ ನಂಬಿಕೆಯನ್ನು ಕಳೆದುಕೊಂಡು, ಆಮೂಲಾಗ್ರ, ರಾಚನಿಕ ಬದಲಾವಣೆಯ ಭರವಸೆ ನೀಡುವ ಕ್ರಾಂತಿಕಾರಿ ನಿರೂಪಣೆಗಳಿಗೆ ಸುಲಭವಾಗಿ ಆಕರ್ಷಿತರಾಗುತ್ತಾರೆ.

ಈ ಪ್ರಕ್ರಿಯೆ ಕೇವಲ ತರಗತಿಗಳಿಗೆ ಸೀಮಿತವಾಗಿರದೆ, ಜನಪ್ರಿಯ ಸಂಸ್ಕೃತಿಯತ್ತಲೂ ಚಾಚಿ ಕೊಳ್ಳುತ್ತದೆ. ಕಲೆ, ಸಿನಿಮಾ, ಡಿಜಿಟಲ್ ವೇದಿಕೆಗಳು, ಸಾಮಾಜಿಕ ಜಾಲತಾಣಗಳು, ಸಾಹಿತ್ಯ ಮತ್ತು ರಂಗಭೂಮಿಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಪ್ರಬಲ ಅಸಗಳಾಗಿವೆ. ಸಾಂಸ್ಕೃತಿಕ ಮಾರ್ಕ್ಸ್‌ವಾದದ ಪ್ರತಿಪಾದಕರ ಪ್ರಕಾರ, ಈ ವೇದಿಕೆಗಳು ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆ, ಧಾರ್ಮಿಕ ನಂಬಿಕೆ, ದೇಶಭಕ್ತಿ ಮತ್ತು ಸಾಂಸ್ಕೃತಿಕ ನಿರಂತರತೆಯನ್ನು ಪ್ರಶ್ನಿಸುತ್ತವೆ; ಜೊತೆಗೆ ವ್ಯಕ್ತಿವಾದ ಹಾಗೂ ಅಸ್ಮಿತೆಯ ರಾಜಕಾರಣವನ್ನು ಉತ್ತೇಜಿಸುತ್ತವೆ. ಇದರ ಪರಿಣಾಮವಾಗಿ, ವಿಶಾಲವಾದ ರಾಷ್ಟ್ರೀಯ ಅಸ್ಮಿತೆಯು ಜಾತಿ, ಧರ್ಮ, ಜನಾಂಗ ಅಥವಾ ಲಿಂಗಾಧಾರಿತ ಸಂಕುಚಿತ ಅಸ್ಮಿತೆಗಳಿಗೆ ದಾರಿ ಮಾಡಿಕೊಡುತ್ತದೆ. ಈ ಸಾಮಾಜಿಕ ವಿಭಜನೆಯು ರಾಷ್ಟ್ರದ ಒಗ್ಗಟ್ಟನ್ನು ದುರ್ಬಲಗೊಳಿಸಿ, ಸಮಾಜವನ್ನು ಸುಲಭವಾಗಿ ರಾಜಕೀಯ ಧ್ರುವೀಕರಣಕ್ಕೆ ದೂಡುತ್ತದೆ.

ಪ್ರತಿಯೊಂದು ಪ್ರಜಾಸತ್ತಾತ್ಮಕ ಸಮಾಜದಲ್ಲಿ ನೈಜ ಸಾಮಾಜಿಕ ಸಮಸ್ಯೆಗಳು ಹಾಗೂ ಐತಿಹಾಸಿಕ ಸವಾಲುಗಳು ಇದ್ದೇ ಇರುತ್ತವೆ; ಅವುಗಳಿಗೆ ಸುಧಾರಣೆಗಳ ಅಗತ್ಯವಿರುತ್ತದೆ. ಜಾತಿ ವ್ಯವಸ್ಥೆ, ಆರ್ಥಿಕ ಅಸಮಾನತೆ, ನಿರುದ್ಯೋಗ, ಶಿಕ್ಷಣ, ಲಿಂಗ ತಾರತಮ್ಯ ಮತ್ತು ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳು ಗಂಭೀರ ಸಾರ್ವಜನಿಕ ಚರ್ಚೆ ಹಾಗೂ ಸಾಂವಿಧಾನಿಕ ಪರಿಹಾರಗಳಿಗೆ ಅರ್ಹವಾಗಿವೆ. ಆದರೆ, ಸೈದ್ಧಾಂತಿಕ ಚಳುವಳಿಗಳು ಸಾಮಾನ್ಯ ರಾಷ್ಟ್ರೀಯ ಹಿತಾಸಕ್ತಿಗಳಿಗಿಂತ ವಿಭಜನೆಗಳಿಗೆ ಒತ್ತು ನೀಡುವ ಮೂಲಕ, ಈ ನ್ಯಾಯಸಮ್ಮತ ಕಾಳಜಿಗಳನ್ನು ಶಾಶ್ವತ ರಾಜಕೀಯ ಸಂಘರ್ಷಗಳಾಗಿ ಪರಿವರ್ತಿಸುತ್ತವೆ. ಈ ನಿರಂತರ ಧ್ರುವೀಕರಣವು ಕೇವಲ ಆಕಸ್ಮಿಕ ಪರಿಣಾಮ ವಲ್ಲ, ಬದಲಾಗಿ ಅದೊಂದು ವ್ಯವಸ್ಥಿತ ರಾಜಕೀಯ ತಂತ್ರ. ನವದೆಹಲಿಯಲ್ಲಿ ಇತ್ತೀಚೆಗೆ ಸಿಜೆಪಿಯೊಂದಿಗೆ ಗುರುತಿಸಿಕೊಂಡು ನಡೆಯುತ್ತಿರುವ ಪ್ರತಿಭಟನೆಗಳು ಈ ಚರ್ಚೆಯನ್ನು ಮುನ್ನೆಲೆಗೆ ತಂದಿವೆ.

ಪರೀಕ್ಷಾ ಅಕ್ರಮಗಳು ಮತ್ತು ಯುವಜನರ ಆಕಾಂಕ್ಷೆಗಳಿಗೆ ಸಂಬಂಧಿಸಿದಂತೆ ಪ್ರತಿಭಟನಾಕಾರರು ಎತ್ತಿದ ಕಾಳಜಿಗಳು ಸಾರ್ವಜನಿಕರ ಗಮನ ಸೆಳೆದಿವೆ. ಆದರೆ, ಈ ಚಳುವಳಿಯ

> » ಬಂಡವಾಳಶಾಹಿ ಮತ್ತು ಕಮ್ಯುನಿಸಂ ನಡುವಿನ ಸಾಂಪ್ರದಾಯಿಕ ವೈರತ್ವವನ್ನು ಬಹುತೇಕರು ತಪ್ಪಾಗಿ ಗ್ರಹಿಸಿದ್ದಾರೆ. ಇವೆರಡೂ ಪರಸ್ಪರ ವಿರುದ್ಧವಾದ ಆರ್ಥಿಕ ವ್ಯವಸ್ಥೆಗಳಂತೆ ಕಂಡರೂ, ವಾಸ್ತವದಲ್ಲಿ ಇವೆರಡೂ ಅಧಿಕಾರವನ್ನು ಕೇಂದ್ರೀಕರಿಸುವ ಸಾಧನಗಳೇ ಆಗಿವೆ. ಬಂಡವಾಳ ಶಾಹಿಯು ಹಣಕಾಸು, ಮಾರುಕಟ್ಟೆ ಮತ್ತು ಆರ್ಥಿಕ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಿದರೆ, ಕಮ್ಯುನಿಸಂ ಸಮಾಜದ ಸಂಸ್ಕೃತಿ, ಶಿಕ್ಷಣ ಮತ್ತು ಸಾಮಾಜಿಕ ಮೌಲ್ಯಗಳನ್ನು ನಿಯಂತ್ರಿಸಲು ಹವಣಿಸುತ್ತದೆ.

ತರುವಾಯದ ವಿಸ್ತರಣೆಯು, ನೈಜ ಸಮಸ್ಯೆಗಳನ್ನು ತಮ್ಮ ಮೂಲ ಬೇಡಿಕೆಗಳನ್ನು ಮೀರಿ ರಾಜಕೀಯ ಅಭಿಯಾನಗಳಾಗಿ ಹೇಗೆ ರೂಪಾಂತರ ಗೊಳ್ಳುತ್ತವೆ ಎಂಬುದನ್ನು ವಿವರಿಸುತ್ತದೆ.

ಉಕ್ರೇನ್‌ನ ಯುರೋಮೈದಾನ್ ಚಳುವಳಿ, ಬಾಂಗ್ಲಾದೇಶದ ಇತ್ತೀಚಿನ ಮೀಸಲಾತಿ ವಿರೋಧಿ ವಿದ್ಯಾರ್ಥಿ ಪ್ರತಿಭಟನೆಗಳು, ಶ್ರೀಲಂಕಾದ ಅರಗಲಯ ದಂಗೆ ಮತ್ತು ನೇಪಾಳದ ಮಾವೋವಾದಿ ಕ್ರಾಂತಿಯನ್ನು ನಾವು ಸರಿಯಾಗಿ ಅಧ್ಯಯನ ಮಾಡಬೇಕು.

ಸಾರ್ವಜನಿಕ ಅಸಮಾಧಾನವನ್ನು ದೀರ್ಘಕಾಲದ ರಾಜಕೀಯ ಲಾಭಕ್ಕೆ ಬಳಸಿಕೊಂಡು, ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆ ಗಳನ್ನು ಹೇಗೆ ಬುಡಮೇಲು ಮಾಡಬಹುದು ಎಂಬುದಕ್ಕೆ ಇವು ನಿದರ್ಶನಗಳಾಗಿವೆ. ಈ ವಿದ್ಯಮಾನಗಳು ದೇಶೀಯ ರಾಜಕೀಯ ವೈಫಲ್ಯಗಳೇ, ಆರ್ಥಿಕ ಬಿಕ್ಕಟ್ಟೇ ಅಥವಾ ಸೈದ್ಧಾಂತಿಕ ಷಡ್ಯಂತ್ರಗಳೇ ಎಂಬ ಬಗ್ಗೆ ಇಂದಿಗೂ ಶೈಕ್ಷಣಿಕ ಚರ್ಚೆಗಳು ನಡೆಯುತ್ತಲೇ ಇವೆ. ಅದೇನೇ ಇದ್ದರೂ, ಸಾರ್ವಜನಿಕ ಅಸಮಾಧಾನಗಳು ದೂರಗಾಮಿ ರಾಜಕೀಯ ಪರಿಣಾಮಗಳನ್ನು ಬೀರುವ ಚಳುವಳಿಗಳಾಗಿ ಹೇಗೆ ವಿಕಸನಗೊಳ್ಳುತ್ತವೆ ಎಂಬುದನ್ನು ಇವು ಸ್ಫುಟವಾಗಿ ವಿವರಿಸುತ್ತವೆ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಕೇವಲ ಒಂದು ಚುನಾಯಿತ ಸರಕಾರವನ್ನು ಉರುಳಿಸುವುದು ಕ್ರಾಂತಿಗಳ ಅಂತಿಮ ಉದ್ದೇಶವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪ್ರಜಾಸತ್ತಾತ್ಮಕ ಚುನಾವಣೆಗಳ ಮೂಲಕ ಸರಕಾರಗಳು ಬದಲಾಗಬಹುದು. ಆದರೆ, ಸಾಂಸ್ಥಿಕ ವ್ಯವಸ್ಥೆಗಳು ತಲೆಮಾರುಗಳವರೆಗೆ ಸಮಾಜದ ಮೇಲೆ ಪ್ರಭಾವ



ಬೀರುತ್ತವೆ. ಆದ್ದರಿಂದಲೇ, ವಿಶ್ವವಿದ್ಯಾಲಯಗಳು, ಮಾಧ್ಯಮ ಸಂಸ್ಥೆಗಳು, ಸಾಂಸ್ಕೃತಿಕ ಕೇಂದ್ರಗಳು, ನಾಗರಿಕ ಸಮಾಜ, ಸಾರ್ವಜನಿಕ ಸಂವಾದ ಮತ್ತು ನ್ಯಾಯಾಂಗದ ಮೇಲೆ ಹಿಡಿತ ಸಾಧಿಸುವುದು ಇವರ ಬಹುದೊಡ್ಡ ಗುರಿಯಾಗಿದೆ. ಈ ಸಂಸ್ಥೆಗಳನ್ನು ನಿಯಂತ್ರಿಸುವವರೇ ಭವಿಷ್ಯದ ತಲೆಮಾರುಗಳ ಮೌಲ್ಯಗಳು, ಆಕಾಂಕ್ಷೆಗಳು ಹಾಗೂ ರಾಜಕೀಯ ಸಂಸ್ಕೃತಿಯನ್ನು ನಿರ್ದೇಶಿಸುತ್ತಾರೆ. ಸಾಂಸ್ಕೃತಿಕ ಹಿಡಿತವು ಅಂತಿಮವಾಗಿ ರಾಜಕೀಯ ಹಿಡಿತವಾಗಿ ಪರಿವರ್ತನೆಗೊಳ್ಳುವುದು ಹೀಗೆಯೇ.

ಪ್ರಜಾಪ್ರಭುತ್ವವು ಸದಾ ಎರಡು ಸಮಾನ ಮಹತ್ವದ ತತ್ವಗಳನ್ನು ಸಮತೋಲನದಲ್ಲಿ ಕಾಯ್ದು ಕೊಳ್ಳಬೇಕು ಎಂಬುದನ್ನು ಈ ವಿದ್ಯಮಾನವು ನೆನಪಿಸುತ್ತದೆ. ಒಂದೆಡೆ, ಸರಕಾರಗಳನ್ನು ಟೀಕಿಸಲು, ಭ್ರಷ್ಟಾಚಾರವನ್ನು ಪ್ರಶ್ನಿಸಲು, ಶೈಕ್ಷಣಿಕ ಸುಧಾರಣೆಗಳಿಗೆ ಆಗ್ರಹಿಸಲು ಮತ್ತು ಶಾಂತಿಯುತ ಪ್ರತಿಭಟನೆಗಳನ್ನು ನಡೆಸಲು ಪ್ರತಿಯೊಬ್ಬ ನಾಗರಿಕನಿಗೂ ಸಾಂವಿಧಾನಿಕ ಹಕ್ಕಿದೆ. ಇಂತಹ ಪ್ರಜಾ ಸತ್ತಾತ್ಮಕ ಎಚ್ಚರವು ಗಣರಾಜ್ಯವನ್ನು ಬಲಪಡಿಸುತ್ತದೆ. ಮತ್ತೊಂದೆಡೆ, ಪ್ರಜಾಸತ್ತಾತ್ಮಕ ಭಿನ್ನಾಭಿಪ್ರಾಯಗಳು ಸದಾ ಶಾಂತಿಯುತವಾಗಿರಬೇಕು; ಹಿಂಸಾಚಾರ, ಬೆದರಿಕೆ ಅಥವಾ ಸಾರ್ವಜನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳ ಬದಲಾಗಿ ಅವು ರಚನಾತ್ಮಕ ನೀತಿ-ನಿರೂಪಣೆಯ ಪರಿಹಾರಗಳ ಮೇಲೆ ಕೇಂದ್ರೀಕೃತವಾಗಿರಬೇಕು.


ಭಾರತದ ಭವಿಷ್ಯವು ನಿರಂತರ ಸಂಘರ್ಷಗಳ ಮೇಲಲ್ಲ, ಬದಲಾಗಿ ಪ್ರಬುದ್ಧ ಸಾರ್ವಜನಿಕ ಸಂವಾದದ ಮೇಲೆ ಅವಲಂಬಿತವಾಗಿದೆ. ವಿದ್ಯಾರ್ಥಿ ಚಳುವಳಿಗಳು ಅಂತ್ಯವಿಲ್ಲದ ರಾಜಕೀಯ ಧ್ರುವೀಕರಣದ ಅಖಾಡಗಳಾಗುವ ಬದಲು; ಶೈಕ್ಷಣಿಕ ಸುಧಾರಣೆ, ಉದ್ಯೋಗ ಸೃಷ್ಟಿ, ಸಾಂಸ್ಥಿಕ ಹೊಣೆಗಾರಿಕೆ, ಪಾರದರ್ಶಕತೆ ಮತ್ತು ಆಡಳಿತದ ಕುರಿತು ಚರ್ಚಿಸುವ ವೇದಿಕೆಗಳಾಗಬೇಕು. ರಾಷ್ಟ್ರದ ಯುವಜನತೆಯ ಅಪಾರ ಬೌದ್ಧಿಕ ಸಾಮರ್ಥ್ಯವು ಸೈದ್ಧಾಂತಿಕ ಸಂಘರ್ಷಗಳಲ್ಲಿ ಪೋಲಾಗುವ ಬದಲು, ರಚನಾತ್ಮಕ ರಾಷ್ಟ್ರ ನಿರ್ಮಾಣದತ್ತ ವಿನಿಯೋಗವಾಗಬೇಕಿದೆ.

ಒಂದು ವಾಸ್ತವವಂತೂ ಸಾರ್ವತ್ರಿಕವಾಗಿ ಪ್ರಸ್ತುತ: ಪ್ರಜಾಸತ್ತಾತ್ಮಕ ಸಮಾಜಗಳು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವ ಜೊತೆಜೊತೆಗೆ, ಎಲ್ಲಾ ಬಗೆಯ ಸೈದ್ಧಾಂತಿಕ ಉಗ್ರವಾದದ ವಿರುದ್ಧವೂ ಸದಾ ಜಾಗರೂಕವಾಗಿರಬೇಕು. ಬಲಿಷ್ಠ ಸಂಸ್ಥೆಗಳು, ಸ್ವತಂತ್ರ ಚಿಂತನೆ, ಸಾಂವಿಧಾನಿಕ ಮೌಲ್ಯಗಳು ಮತ್ತು ಪ್ರಬುದ್ಧ ನಾಗರಿಕ ಸಹಭಾಗಿತ್ವವೇ ಪ್ರಜಾಪ್ರಭುತ್ವದ ನೈಜ ರಕ್ಷಾಕವಚಗಳು.

ಭಾರತದ ಭವಿಷ್ಯವು ಕೇವಲ ಚುನಾವಣಾ ವಿಜಯಗಳು ಅಥವಾ ರಾಜಕೀಯ ಘೋಷಣೆಗಳಿಂದ ನಿರ್ಧಾರವಾಗುವುದಿಲ್ಲ. ಅದು ತನ್ನ ಸಾಂಸ್ಥಿಕ ವ್ಯವಸ್ಥೆಗಳ ಬಲ, ತನ್ನ ನಾಗರಿಕತೆಯ ಪರಂಪರೆಯ ಬಗ್ಗೆ ಪ್ರಜೆಗಳಿಗಿರುವ ವಿಶ್ವಾಸ, ಸಾರ್ವಜನಿಕ ಚರ್ಚೆಯ ಗುಣಮಟ್ಟ ಮತ್ತು ಸಾಂವಿಧಾನಿಕ ಮಾರ್ಗಗಳ ಮೂಲಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವ ಜನರ ಇಚ್ಛಾಶಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ವಿಚಾರಗಳು ಸಂಸ್ಥೆಗಳನ್ನು ರೂಪಿಸುತ್ತವೆ, ಸಂಸ್ಥೆಗಳು ರಾಷ್ಟ್ರಗಳನ್ನು ಕಟ್ಟುತ್ತವೆ; ಮತ್ತು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯದ ಜೊತೆಗೆ ಬೌದ್ಧಿಕ ಹೊಣೆಗಾರಿಕೆ, ಸಾಮಾಜಿಕ ಒಗ್ಗಟ್ಟು ಹಾಗೂ ಶಾಂತಿಯುತ ಸುಧಾರಣೆಗಳಿಗೆ ಅಚಲವಾದ ಬದ್ಧತೆ ಇದ್ದಾಗ ಮಾತ್ರ ಯಾವುದೇ ರಾಷ್ಟ್ರ ಚಿರಕಾಲ ಉಳಿಯಬಲ್ಲದು.

**– ಡಾ. ನಿರಂಜನ** ಪೂಜಾರ

---



> ಜಗತ್ತನ್ನೇ ತಲ್ಲಣಗೊಳಿಸಿದ ಕೋವಿಡ್-19 ಪಿಡುಗು ವೈದ್ಯಕೀಯ ಲೋಕಕ್ಕೆ ಪರೀಕ್ಷಾ ಕಾಲ. ಅನಿರೀಕ್ಷಿತವಾಗಿ ಬಂದೊದಗಿದ ಕಾಯಿಲೆಗೆ ಮದ್ದಿಲ್ಲವೆಂದು ತಿಳಿದಿದ್ದರೂ ವೈದ್ಯರನ್ನೇ ನಂಬಿ ಆಸ್ಪತ್ರೆಗೆ ಬರುವ ರೋಗಿಗಳು. ವಿಶ್ವ ಆರೋಗ್ಯ ಸಂಸ್ಥೆ, ಅಂತಾರಾಷ್ಟ್ರೀಯ ವೈದ್ಯಕೀಯ ಮಂಡಳಿ ಯಂಥವುಗಳೇ ಯಾವ ಚಿಕಿತ್ಸೆ ಸೂಚಿಸಬೇಕೆಂದು ತಿಳಿಯದೆ ಕೈಚೆಲ್ಲಿದ ಪರಿಸ್ಥಿತಿ.

# ವೈದ್ಯ ವೃತ್ತಿಯ ನೀತಿ ಸಂಹಿತೆ ಕೇವಲ ಕಾಗದದ ತುಂಡಾ?

ಕಾನೂನ್ ಸೆನ್ಸ್ ಡಾ.ಡೆತ್ ಎಂಬ ವೆಬ್ ಸೀರಿಸ್ ಕುರಿತು ಅನೇಕರು ಕೇಳಿರಬಹುದು. ಉತ್ತರ ಟೆಕ್ಸಾಸ್‌ನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದ ಡಾ.ಕ್ರಿಸ್ಟೋಫರ್ ಡನ್ಟ್ಸ್ ಎಂಬ ಅರೆ-ಹುಚ್ಚ, ನಕಲಿ ನ್ಯುರೋ ಸರ್ಜನ್ ಎರಡು ವರ್ಷಗಳಲ್ಲಿ ಮಾಡಿದ ನರ ಶಸ್ತ್ರಚಿಕಿತ್ಸೆಗಳ ಪರಿಣಾಮವಾಗಿ 31 ಜನರು ಶಾಶ್ವತ ಅಂಗವಿಕಲರಾಗಿ ಇಬ್ಬರು ಸಾವನ್ನಪ್ಪಿದ ಘಟನೆಗಳ ಸುತ್ತ ಈ ಧಾರಾವಾಹಿ ಕೇಂದ್ರೀಕೃತವಾಗಿದೆ. ತುಂಬಾ ಆಕರ್ಷಕ ವ್ಯಕ್ತಿತ್ವ ಹೊಂದಿದ ಆತ ತಾನು ನಿಜಕ್ಕೂ ಸಮರ್ಥ ನ್ಯುರೋಸರ್ಜನ್ ಎಂದು ಆಸ್ಪತ್ರೆಯ ಅಧಿಕಾರಿಗಳನ್ನು ಮತ್ತು ಇತರ ವೈದ್ಯರನ್ನು, ನರ್ಸ್‌ಗಳನ್ನು ನಂಬಿಸಿದ ಬಗೆ ರೋಚಕ. ಆತನನ್ನು ಶಂಕಿಸಿದವರೂ ಆತನಿಗೆ ಏನೂ ಮಾಡಲಾಗದೆ ಅಸಹಾಯಕರಾದರು.

ನಿಜ ಘಟನೆಯನ್ನು ಆಧರಿಸಿದ ಈ ಧಾರಾವಾಹಿ, ವೈದ್ಯಕೀಯ ವ್ಯವಸ್ಥೆಯ ಕರಾಳ ಮುಖ ಮತ್ತು ಅಸ್ತವ್ಯಸ್ತತೆಗಳನ್ನು ತೆರೆದಿಡುವದರ ಜೊತೆಗೆ ಧನದಾಹೀ ವೈದ್ಯನಿಂದಾಗಿ ಜೀವ ಕಳೆದುಕೊಂಡ ಅಥವಾ ಅಂಗವಿಕಲರಾದ ಹತಭಾಗ್ಯ ರೋಗಿಗಳ ದಾರುಣ ವ್ಯಥೆಯನ್ನು ಬಿಂಬಿಸುತ್ತದೆ. ಆತನ ಲೈಸೆನ್ಸ್ ರದ್ದಾಗಿ ಆತ ಜೀವಾವಧಿ ಶಿಕ್ಷೆಗೆ ಗುರಿಯಾಗುವ ಹೊತ್ತಿಗೆ ಸರಿಪಡಿಸಲಾಗದ ಅನಾಹುತಗಳ ಸರಮಾಲೆಯೇ ನಡೆದು ಹೋಗಿರುತ್ತದೆ.

ಜಗತ್ತನ್ನೇ ತಲ್ಲಣಗೊಳಿಸಿದ ಕೋವಿಡ್-19 ಪಿಡುಗು ವೈದ್ಯಕೀಯ ಲೋಕಕ್ಕೆ ಪರೀಕ್ಷಾ ಕಾಲ. ಅನಿರೀಕ್ಷಿತವಾಗಿ ಬಂದೊದಗಿದ ಕಾಯಿಲೆಗೆ ಮದ್ದಿಲ್ಲವೆಂದು ತಿಳಿದಿದ್ದರೂ ವೈದ್ಯರನ್ನೇ ನಂಬಿ ಆಸ್ಪತ್ರೆಗೆ ಬರುವ ರೋಗಿಗಳು. ವಿಶ್ವ ಆರೋಗ್ಯ ಸಂಸ್ಥೆ, ಅಂತಾರಾಷ್ಟ್ರೀಯ ವೈದ್ಯಕೀಯ ಮಂಡಳಿ ಯಂಥವುಗಳೇ ಯಾವ ಚಿಕಿತ್ಸೆ ಸೂಚಿಸಬೇಕೆಂದು ತಿಳಿಯದೆ ಕೈಚೆಲ್ಲಿದ ಪರಿಸ್ಥಿತಿ. ಆದರೆ ಅನೇಕರು ಕರೋನಾಗೆ ಚಿಕಿತ್ಸೆ ನೀಡುತ್ತೇವೆ ಎಂದು ರಾಜಾರೋಷ ಘೋಷಿಸಿಯೇ ಬಿಟ್ಟರು. ಅಧಿಕೃತ ಔಷಧವೇ ಇಲ್ಲದ ಕಾಯಿಲೆಯ ಚಿಕಿತ್ಸೆಗೆ ರೋಗಿಗಳನ್ನು ಅಡ್ಮಿಟ್ ಮಾಡಿಕೊಂಡು ಲಕ್ಷಗಟ್ಟಲೆ ಬಿಲ್ ಮಾಡಲಾಯಿತು.

ತರಾತುರಿಯಲ್ಲಿ ತರಲಾದ ವ್ಯಾಕ್ಸಿನ್‌ಗಳ ಕಂಪನಿಗಳಿಗೆ ಹಣದ ಸುರಿಮಳೆಯೇ ಆಯಿತು. ಪಿಪಿಇ ಕಿಟ್, ಟೆಸ್ಟ್-ಕಿಟ್, ಬಗೆ ಬಗೆಯ ಮಾಸ್ಕ್‌ಗಳು, ಸ್ಯಾನಿಟೈಸರ್‌ಗಳು, ಹ್ಯಾಂಡ್ ವಾಶ್, ಹ್ಯಾಂಡ್ ಗ್ಲೌಸ್ ಇವೆಲ್ಲವೂ ಹಲವು ಪಟ್ಟು ದರದಲ್ಲಿ ಮಾರಾಟವಾದವು. ಎಲ್ಲಾ ಕಡೆ ಸ್ಟಾಕ್ ಖಾಲಿ. ಜ್ವರದ ಮಾತ್ರೆಗಳು, ಇಂಜೆಕ್ಶನ್‌ಗಳಂತೂ ಕಾಳಸಂತೆಯಲ್ಲಿ ಮಾರಾಟವಾದವು. ಔಷಧದ ಅಂಗಡಿಗಳಿಗೆ ಬಾಗಿಲು ಹಾಕಲು ಪುರಸೊತ್ತಿಲ್ಲ. ಆಕ್ಸಿಜೆನ್ ಸಿಲೆಂಡರ್ ತುಂಬಿಸುವ ಹೊಸ ಕಾರ್ಖಾನೆಗಳು ಪ್ರಾರಂಭವಾದವು. ಆಯುರ್ವೇದ, ಹೋಮಿಯೋಪತಿ ಎಲ್ಲರ ಔಷಧಗಳೂ ಮಾರಾಟವಾದವು. ಸರಕಾರ ನೀಡುವ ಅನುದಾನದ ಲಾಭ ಪಡೆಯಲು ನಕಲಿ ಕರೋನಾ ಸೆಂಟರ್‌ಗಳನ್ನು ಆರಂಭಿಸಿ, ನಕಲಿ ಚಿಕಿತ್ಸಾ ದಾಖಲೆಗಳನ್ನು ಸೃಷ್ಟಿಸಲಾಗಿತ್ತು ಎಂಬ ಆಪಾದನೆಯಿದೆ. ವಿಶ್ವಾದ್ಯಂತ ತಲ್ಲಣ ಸೃಷ್ಟಿಸಿದ ಪಿಡುಗೊಂದು ಬಿಲಿಯನ್‌ಗಟ್ಟಲೆ ವ್ಯವಹಾರಕ್ಕೆ ಕಾರಣವಾದದ್ದು ಇತಿಹಾಸ.

ಬಿಳಿ ಕಾಲರ್ ವಂಚನೆ ಎಂದು ಕರೆಯಲ್ಪಡುವ ವೈದ್ಯಕೀಯ ರಂಗದ ವಂಚನೆಯ ಜಾಲ ರೋಗಿಗಳನ್ನಲ್ಲದೆ ಪ್ರಾಮಾಣಿಕ ವೈದ್ಯರನ್ನೂ ಚಿಂತೆಗೀಡು ಮಾಡಿದೆ. ಕಿಕ್-ಬ್ಯಾಕ್, ಕಮಿಶನ್, ರೆಫರೆನ್ಸ್ ಫೀಯಂಥ ವ್ಯವಸ್ಥೆ ಎಲ್ಲಾ ಹಂತದಲ್ಲಿ ಕಾರ್ಯನಿರ್ವಹಿಸುತ್ತದೆ. ಅದು ಹೃದಯ ಕಾಯಿಲೆಗೆ ಸ್ಟೆಂಟ್ ಹಾಕುವದಿರಲಿ, ಮೊಣಕಾಲು ಮಂಡಿ ರಿಪ್ಲೇಸ್‌ಮೆಂಟ್ ಇರಲಿ ಅಥವಾ ಬೆನ್ನು ನೋವಿಗೆ ನರದ ಆಪರೇಶನ್ ಇರಲಿ. ಎಲ್ಲಾ ಕಡೆ ಒಂದೇ ಸೂತ್ರ - ಎಲ್ಲರಿಗೂ ಪಾಲು. ರೋಗಿಯ ಕಿಸೆಗೆ ಕತ್ತರಿ.

ಇದಕ್ಕೇ ಇರಬೇಕು ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರಃ ಯಮಸ್ತು ಹರತಿ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿಚ ಅಂದರೆ ಯಮ ಕೇವಲ ಪ್ರಾಣವನ್ನು ಅಪಹರಿಸಿದರೆ ಅವನ ಸಹೋದರ ನಾದ ವೈದ್ಯನು ಪ್ರಾಣ ಮತ್ತು ಹಣ ಎರಡನ್ನೂ ಅಪಹರಿಸುತ್ತಾರೆ ಎಂಬ ಸುಭಾಷಿತ ಹುಟ್ಟಿಕೊಂಡದ್ದು. ಇದು ಅನ್ವಯವಾಗದ ದಕ್ಷ, ಪ್ರಾಮಾಣಿಕ, ಸೇವಾ ನಿರತ ವೈದ್ಯರಿಗೆ ನಮಸ್ತುಭ್ಯಂ ಎನ್ನಲೇ ಬೇಕು.



ಭಾರತದಲ್ಲಿ ವೈದ್ಯಕೀಯ ರಂಗದ ಕಾರ್ಯಗಳನ್ನು ನಿಯಂತ್ರಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗ ಇದೆ. ಇನ್ನು ಔಷಧ ತಯಾರಿಕೆಯನ್ನು ಪರಿಶೀಲಿಸಿ ಅವುಗಳ ಸುರಕ್ಷತೆ ಖಾತರಿ ಪಡಿಸಿ, ದರ ನಿಗದಿಯನ್ನೂ ನಿಯಂತ್ರಿಸಲು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ, ರಾಷ್ಟ್ರೀಯ ವೈದ್ಯಕೀಯ ಆಯೋಗ, ರಾಷ್ಟ್ರೀಯ ಫಾರ್ಮಾಸ್ಯುಟಿಕಲ್ ದರ ನಿಗದಿ ಪ್ರಾಧಿಕಾರ ಮುಂತಾದ ಸಂಸ್ಥೆಗಳಿವೆ. ಇವುಗಳಲ್ಲದೆ ರಾಜ್ಯ ಮಟ್ಟದಲ್ಲಿ ಕೂಡಾ ಲೈಸೆನ್ಸ್ ನೀಡುವ ಸ್ಟೇಟ್ ಲೈಸೆನ್ಸಿಂಗ್ ಪ್ರಾಧಿಕಾರಗಳಿವೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಆರೋಗ್ಯ ವಿಜ್ಞಾನದ ಡೈರೆಕ್ಟರ್ ಜನರಲ್‌ರವರ ಕಚೇರಿ ಇಡೀ ದೇಶದ ಆರೋಗ್ಯ ವ್ಯವಸ್ಥೆಯನ್ನು ನಿಯಂತ್ರಿಸುವ ಹೊಣೆ ಹೊತ್ತಿದೆ. 2010ರಲ್ಲಿ ಕ್ಲಿನಿಕಲ್ ಸ್ಥಾಪನೆ (ನೋಂದಣಿ ಮತ್ತು ನಿಯಂತ್ರಣ) ಕಾಯ್ದೆಯನ್ನು ಜಾರಿ ಮಾಡಲಾಯಿತು.

ಕರ್ನಾಟಕದಲ್ಲಿ 2007ರಲ್ಲೇ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯನ್ನು ಜಾರಿಗೊಳಿಸಲಾಗಿತ್ತು. ಈ ಕಾಯಿದೆಗಳು ಖಾಸಗಿ ಆಸ್ಪತ್ರೆಗಳು, ಕ್ಲಿನಿಕ್‌ಗಳು ನರ್ಸಿಂಗ್ ಹೋಮ್, ಲ್ಯಾಬೊ ರೇಟರಿ, ಸ್ಕ್ಯಾನಿಂಗ್ ಸೆಂಟರ್, ಎಕ್ಸ್‌ರೇ, ಫಿಸಿಯೋ ಥೆರಪಿ ಸೆಂಟರ್, ಹಲ್ಲಿನ ಆಸ್ಪತ್ರೆ ಮುಂತಾದ ಎಲ್ಲ ಬಗೆಯ ವೈದ್ಯಕೀಯ ವ್ಯವಸ್ಥೆಗಳಿಗೆ ಅನ್ವಯವಾಗುತ್ತವೆ. ಅಂಥ ಎಲ್ಲ ಕಾರ್ಯಸ್ಥಾನಗಳಲ್ಲಿ ಅಗತ್ಯ ಸೇವಾ ಗುಣಮಟ್ಟ, ಸ್ವಚ್ಛತೆ, ಅಗತ್ಯ ವಿದ್ಯಾರ್ಹತೆ ಇರುವ ವೈದ್ಯರು ಮತ್ತು ಸಿಬ್ಬಂದಿ, ಉಪಕರಣಗಳ ಕಾರ್ಯಕ್ಷಮತೆ, ಸೇವಾದಕ್ಷತೆಯಂಥ ಎಲ್ಲ ವಿಷಯಗಳನ್ನು ಪರಿಶೀಲಿಸಿಯೇ ಲೈಸೆನ್ಸ್ ನೀಡಲಾಗುತ್ತದೆ ಮತ್ತು ಲೈಸೆನ್ಸ್ ನವೀಕರಿಸುವಾಗಲೂ ಇವೆಲ್ಲವನ್ನು ಪರಿಶೀಲಿಸಲಾಗುತ್ತದೆ.

ಆಸ್ಪತ್ರೆಗಳು ಹೊಂದಿರಬೇಕಾದ ವಿವಿಧ ಗುಣಮಟ್ಟಗಳನ್ನು ನಿಗದಿಪಡಿಸಲು ಮತ್ತು ಅಂಥ ಗುಣಮಟ್ಟವನ್ನು ಹೊಂದಿರುವದನ್ನು ಪರಿಶೀಲಿಸುವ ಸಲುವಾಗಿ ಪರಿಣಿತರ ಸಮಿತಿ ಇದೆ. ವಿವಿಧ ರೋಗಗಳಿಗೆ ಅನುಸರಿಸಬೇಕಾದ ಚಿಕಿತ್ಸಾ ವಿಧಾನ, ಅಗತ್ಯವಿರುವ ಟೆಸ್ಟ್‌ಗಳು, ಅಂಥ ಎಲ್ಲಾ ಟೆಸ್ಟ್, ಚಿಕಿತ್ಸಾ ವಿಧಾನ ಮತ್ತು ಶಸ್ತ್ರ ಚಿಕಿತ್ಸೆಗಳಿಗೆ ವಿಧಿಸಬೇಕಾದ ಶುಲ್ಕ ಮುಂತಾದವುಗಳನ್ನು ನಿಗದಿ ಪಡಿಸುವ ಅಧಿಕಾರ ಆ ಸಮಿತಿಗೆ ಇದೆ. ಅಲ್ಲದೆ ವಿವಿಧ ರೋಗ ಪತ್ತೆ ಪ್ರಕ್ರಿಯೆ, ಚಿಕಿತ್ಸೆ ಮತ್ತು ವಿಧಾನಗಳಿಗೆ ತಾವು ವಿಧಿಸುವ ಶುಲ್ಕದ ವಿವರಗಳನ್ನು ಎಲ್ಲಾ ಖಾಸಗೀ ಆಸ್ಪತ್ರೆಗಳಲ್ಲಿ ಎಲ್ಲರಿಗೂ ಕಾಣುವ ಸ್ಥಳದಲ್ಲಿ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಬೇಕು ಮತ್ತು ಅಂಥ ವಿವರಗಳನ್ನು ಸರಕಾರ ಸೂಚಿಸಿದ ವೆಬ್ ಸೈಟ್ ಹಾಗೂ ತಮ್ಮದೇ ವೆಬ್ ಸೈಟ್‌ನಲ್ಲಿ ಕೂಡಾ ಪ್ರಚುರ ಪಡಿಸ ಬೇಕೆಂಬ ನಿಯಮವಿದೆ.

ಅಲ್ಲದೆ ರೋಗಿಗಳಿಗೆ ನೀಡುವ ಬಿಲ್‌ನಲ್ಲಿ ಅಂಥ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿದ ದರಗಳಿಗಿಂತ ಹೆಚ್ಚಿನ ಹಣವನ್ನು ರೋಗಿಗಳಿಂದ ಖಾಸಗಿ ಆಸ್ಪತ್ರೆಗಳು ಪಡೆಯುವಂತಿಲ್ಲ. ಪರಿಣಿತರ ಸಮಿತಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಟೆಸ್ಟ್‌ಗಳು, ಚಿಕಿತ್ಸೆ ಅಥವಾ ವಿಧಾನಗಳನ್ನು ಮಾಡುವದಿದ್ದಲ್ಲಿ ಅದರ ಅಗತ್ಯ ಮತ್ತು ವೆಚ್ಚಗಳ ಕುರಿತು ರೋಗಿಗೆ ಅಥವಾ ಅವರ ಸಂಬಂಧಿಕರಿಗೆ ಸರಿಯಾಗಿ ತಿಳಿಹೇಳಿ ಅವರ ಒಪ್ಪಿಗೆ ಪಡೆದ ನಂತರವೇ ಅಂಥ ಚಿಕಿತ್ಸೆಗಳನ್ನು ನಡೆಸಬೇಕು.


ಸರಕಾರೀ ಆರೋಗ್ಯ ಯೋಜನೆಗಳ ಸೌಲಭ್ಯಗಳಿಗೆ ಅರ್ಹರಾಗುವ ರೋಗಿಗಳಿಗೆ ಆಯಾ ಯೋಜನೆ ಯಂತೆ ಸರಕಾರದಿಂದ ಲಭಿಸುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಮಾತ್ರ ರೋಗಿಗಳಿಂದ ಪಡೆಯಬೇಕು ಮತ್ತು ಅಂಥ ರೋಗಿಗಳಿಗೆ ಸರಕಾರ ನಿಗದಿ ಪಡಿಸಿದ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು ಪಡೆಯುವಂತಿಲ್ಲ.

ಆಸ್ಪತ್ರೆ ಮತ್ತು ಲ್ಯಾಬೊರೇಟರಿಯಂಥ ವೈದ್ಯಕೀಯ ಕೇಂದ್ರಗಳ ಕುರಿತು ರೋಗಿಗಳು ಅಥವಾ ಇತರರು ದೂರು ಸಲ್ಲಿಸಲು ಪ್ರತೀ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಜಿಲ್ಲಾ ಆರೋಗ್ಯ ಅಧಿಕಾರಿಯನ್ನೂ ಒಳಗೊಂಡ ಕುಂದುಕೊರತೆ ಪರಿಹಾರ ಸಮಿತಿಗಳನ್ನು ರಚಿಸಲಾಗಿದೆ. ಯಾವದೇ ದೂರು ಬಂದಲ್ಲಿ ಆ ಕುರಿತು ವಿಚಾರಣೆ ನಡೆಸಿ ಸೂಕ್ತ ಆದೇಶ ನೀಡಲು ಸಮಿತಿಗೆ ಅಧಿಕಾರವಿದೆ.

ಈ ಕಾಯಿದೆಗೆ 2018ರಲ್ಲಿ ಮಾಡಲಾದ ಮಹತ್ವದ ತಿದ್ದುಪಡಿಯೆಂದರೆ ಖಾಸಗಿ ಆಸ್ಪತ್ರೆಗಳಿಗೆ ಎಮರ್ಜೆನ್ಸಿ ಚಿಕಿತ್ಸೆಗಾಗಿ ರೋಗಿಯನ್ನು ಕರೆತಂದಾಗ ಅವರಿಂದ ಮುಂಗಡ ಹಣ ಪಡೆಯದೆ ಅಂಥ ಚಿಕಿತ್ಸೆಯನ್ನು ನೀಡಬೇಕು ಮತ್ತು ರೋಗಿ ತೀರಿಕೊಂಡರೆ ಹಣ ನೀಡಲಿಲ್ಲವೆಂಬ ಕಾರಣಕ್ಕೆ ಶವವನ್ನು ಸಂಬಂಧಿಕರಿಗೆ ಹಸ್ತಾಂತರಿಸಲು ನಿರಾಕರಿಸಬಾರದು ಎಂಬ ನಿಯಮಗಳನ್ನು ತರಲಾಗಿದೆ. ರೋಗಿಗಳಿಗೆ ಚಿಕಿತ್ಸೆಯನ್ನು ಪಡೆಯುವ ಹಕ್ಕು, ಚಿಕಿತ್ಸೆಯ ಪೂರ್ತಿ ವಿವರ ಪಡೆಯುವ ಹಕ್ಕು, ಇನ್ನೊಬ್ಬ ವೈದ್ಯರ 2ನೇ ಅಭಿಪ್ರಾಯ ಪಡೆಯುವ ಹಕ್ಕು, ಸರಕಾರ ನಿಗದಿ ಪಡಿಸಿದ್ದಕ್ಕಿಂತ ಹೆಚ್ಚಿನ ಶುಲ್ಕ ನೀಡದಿರುವ ಹಕ್ಕು ಕೂಡಾ ಸೇರಿದೆ.

ರಾಷ್ಟ್ರೀಯ ವೈದ್ಯಕೀಯ ಆಯೋಗವು ದೇಶದಲ್ಲಿ ವೈದ್ಯ ವೃತ್ತಿಯಲ್ಲಿರುವವರು ಅನುಸರಿಸಬೇಕಾದ ನೀತಿ ಸಂಹಿತೆಯನ್ನು 2002ರಲ್ಲಿಯೇ ಬಿಡುಗಡೆ ಮಾಡಿದೆ. ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಈ ನೀತಿ ಸಂಹಿತೆಯು ವೈದ್ಯ ವೃತ್ತಿಯಲ್ಲಿ ಸೇವೆಯೇ ಪ್ರಥಮ ಆದ್ಯತೆಯಾಗಿದ್ದು ಹಣ ಗಳಿಕೆಗಾಗಿ ವೃತ್ತಿ ಧರ್ಮವನ್ನು ಬಿಡಬಾರದು ಎಂಬ ಸ್ಪಷ್ಟ ಸಂದೇಶ ನೀಡುತ್ತದೆ.

ಆ ದೇಶದ ರೂಪದಲ್ಲಿರುವ ಈ ನಿಯಮಾವಳಿಗಳು ವೈದ್ಯಕೀಯ ವೃತ್ತಿಯಲ್ಲಿರುವವರು ಪಾಲಿಸ ಬೇಕಾದ ನಿಯಮಗಳು, ಇರಿಸಬೇಕಾದ ದಾಖಲೆಗಳು, ರೋಗಿಗಳ ಕುರಿತು ಅವರು ತೋರಿಸಬೇಕಾದ ಕಾಳಜಿ ಹಾಗೂ ಕರ್ತವ್ಯ, ವೈದ್ಯರು ಪಾಲಿಸಬೇಕಾದ ವೈಯಕ್ತಿಕ ನಡವಳಿಕೆಗಳು ಮುಂತಾದ ಅನೇಕ ವಿಷಯಗಳನ್ನು ಒಳಗೊಂಡಿದೆ. ಸಕಾರಣವಿಲ್ಲದೆ ಯಾವದೇ ರೋಗಿಗೆ ಚಿಕಿತ್ಸೆಯನ್ನು ನಿರಾಕರಿಸುವದನ್ನು ಇದು ನಿಷೇಧಿಸುತ್ತದೆ. ಆದರೆ ಯಾವದೇ ಚಿಕಿತ್ಸೆ ನೀಡುವದು ತನ್ನ ಜ್ಞಾನ ಮತ್ತು ಅನುಭವಕ್ಕೆ ಮೀರಿದ್ದಾದರೆ ಅಂಥ ಚಿಕಿತ್ಸೆಯನ್ನು ನೀಡಬಾರದು ಎಂದಿದೆ. ಅಂಥ ಸಂದರ್ಭದಲ್ಲಿಯೂ



ರೋಗಿಯ ಕುರಿತಾದ ಕಾಳಜಿ, ತೆಗೆದುಕೊಳ್ಳಬೇಕಾದ ಕರ್ತವ್ಯವನ್ನು ಹೇಳಲಾಗಿದೆ.

ಇನ್ನು ಔಷಧಗಳ ತಯಾರಿಕೆ, ಆಮದು ಮತ್ತು ಮಾರಾಟಗಳನ್ನು ನಿಯಂತ್ರಿಸುವ ಔಷಧಗಳು ಮತ್ತು ಸೌಂದರ್ಯವರ್ಧಕಗಳ ಕಾಯ್ದೆ- 1940, ಔಷಧ (ನಿಯಂತ್ರಣ) ಕಾಯ್ದೆ - 1950 ಯಂಥ ಕಾಯಿದೆಗಳು ನಿಷೇಧಿತ ಔಷಧಗಳ ಆಮದು ಮತ್ತು ಮಾರಾಟ, ಔಷಧಗಳಿಗೆ ಬೇಕಾಬಿಟ್ಟಿ ದರ ನಿಗದಿ ಮತ್ತು ನಕಲಿ ಔಷಧಗಳ ಮಾರಾಟದಂಥ ಅಕ್ರಮಗಳಿಗೆ ತಡೆ ಒಡ್ಡಲು ರೂಪಿತವಾಗಿವೆ.

ಆದರೆ ಇಂಥ ಕಾನೂನುಗಳು ಇವೆ ಎಂಬುದೇ ಅನೇಕರಿಗೆ ತಿಳಿದಿರುವದಿಲ್ಲ ಮತ್ತು ತಿಳಿದರೂ ವ್ಯವಸ್ಥೆಯ ವಿರುದ್ಧ ಹೋರಾಡುವ ಸಾಹಸಕ್ಕೆ ಕೈಹಾಕುವದಿಲ್ಲ. ಇಷ್ಟೆಲ್ಲ ಕಾನೂನುಗಳು, ನಿಯಂತ್ರಣ ಮತ್ತು ವಿಚಕ್ಷಣ ವ್ಯವಸ್ಥೆ ಇದ್ದರೂ ಹಣದಾಹದ ಕಾರಣಕ್ಕೆ ಕೆಲವು ವ್ಯಕ್ತಿ ಹಾಗೂ ಸಂಸ್ಥೆಗಳು ರೋಗಿಗಳಿಗೆ ಹಾಗೂ ತನ್ಮೂಲಕ ಸಮಾಜಕ್ಕೆ ಮೋಸ, ವಂಚನೆ ಮಾಡಿದ ಘಟನೆಗಳು ವರದಿಯಾಗಿವೆ. ಕಾನೂನಿನ ಗೋಡೆಗಳು ಎಲ್ಲಿ ದುರ್ಬಲವಾಗಿವೆ, ಕಾನೂನು ರಕ್ಷಕರನ್ನು ಹೇಗೆ ಯಾಮಾರಿಸಬೇಕು ಅಥವಾ ಒಲಿಸಿಕೊಳ್ಳಬೇಕು ಎಂಬುದನ್ನು ಅರಿತಿರುವವರಿಗೆ ಕಾನೂನುಗಳು ಕೇವಲ ಕಾಗದದ ಮೇಲಿನ ಪ್ರಿಂಟ್ ಅಷ್ಟೆ ಎಂಬುದು ತಿಳಿದಿರುತ್ತದೆ.

**– ತಿಮ್ಮಣ್ಣ** ಭಾಗವತ್

## ವೈದ್ಯಕೀಯ ಲೋಕಕ್ಕೆ ಪರೀಕ್ಷಾ ಕಾಲ

- ಅನಿರೀಕ್ಷಿತವಾಗಿ ಬಂದೊದಗಿದ ಕಾಯಿಲೆಗೆ ಮದ್ದಿಲ್ಲವೆಂದು ತಿಳಿದಿದ್ದರೂ ವೈದ್ಯರನ್ನೇ ನಂಬಿ ಆಸ್ಪತ್ರೆಗೆ ಬರುವ ರೋಗಿಗಳು.
- ವಿಶ್ವ ಆರೋಗ್ಯ ಸಂಸ್ಥೆ, ಅಂತಾರಾಷ್ಟ್ರೀಯ ವೈದ್ಯಕೀಯ ಮಂಡಳಿ ಯಂಥವುಗಳೇ ಯಾವ ಚಿಕಿತ್ಸೆ ಸೂಚಿಸಬೇಕೆಂದು ತಿಳಿಯದೆ ಕೈಚೆಲ್ಲಿದ ಪರಿಸ್ಥಿತಿ.
- ಆದರೆ ಅನೇಕರು ಕರೋನಾಗೆ ಚಿಕಿತ್ಸೆ ನೀಡುತ್ತೇವೆ ಎಂದು ರಾಜಾರೋಷ ಘೋಷಿಸಿಯೇ ಬಿಟ್ಟರು.
- ಅಧಿಕೃತ ಔಷಧವೇ ಇಲ್ಲದ ಕಾಯಿಲೆಯ ಚಿಕಿತ್ಸೆಗೆ ರೋಗಿಗಳನ್ನು ಅಡ್ಮಿಟ್ ಮಾಡಿ ಕೊಂಡು ಲಕ್ಷಗಟ್ಟಲೆ ಬಿಲ್ ಮಾಡಲಾಯಿತು.
- ತರಾತುರಿಯಲ್ಲಿ ತರಲಾದ ವ್ಯಾಕ್ಸಿನ್ ಗಳ ಕಂಪನಿಗಳಿಗೆ ಹಣದ ಸುರಿಮಳೆಯೇ ಆಯಿತು.
- ಪಿಪಿಇ ಕಿಟ್, ಟೆಸ್ಟ್-ಕಿಟ್, ಬಗೆ ಬಗೆಯ ಮಾಸ್ಕ್‌ಗಳು, ಸ್ಯಾನಿಟೈಸರ್‌ಗಳು, ಹ್ಯಾಂಡ್ ವಾಶ್, ಹ್ಯಾಂಡ್ ಗ್ಲೌಸ್ ಇವೆಲ್ಲವೂ ಹಲವು ಪಟ್ಟು ದರದಲ್ಲಿ ಮಾರಾಟವಾದವು. ಎಲ್ಲಾ ಕಡೆ ಸ್ಟಾಕ್ ಖಾಲಿ.
- ಜ್ವರದ ಮಾತ್ರೆಗಳು, ಇಂಜೆಕ್ಶನ್‌ಗಳಂತೂ ಕಾಳಸಂತೆಯಲ್ಲಿ ಮಾರಾಟವಾದವು.
- ಔಷಧದ ಅಂಗಡಿಗಳಿಗೆ ಬಾಗಿಲು ಹಾಕಲು ಪುರಸೊತ್ತಿಲ್ಲ. ಆಕ್ಸಿಜೆನ್ ಸಿಲೆಂಡರ್ ತುಂಬಿಸುವ ಹೊಸ ಕಾರ್ಖಾನೆಗಳು ಪ್ರಾರಂಭವಾದವು.
- ಆಯುರ್ವೇದ, ಹೋಮಿಯೋಪತಿ ಎಲ್ಲರ ಔಷಧಗಳೂ ಮಾರಾಟವಾದವು.
- ಸರಕಾರ ನೀಡುವ ಅನುದಾನದ ಲಾಭ ಪಡೆಯಲು ನಕಲಿ ಕರೋನಾ ಸೆಂಟರ್‌ಗಳನ್ನು ಆರಂಭಿಸಿ, ನಕಲಿ ಚಿಕಿತ್ಸಾ ದಾಖಲೆಗಳನ್ನು ಸೃಷ್ಟಿಸಲಾಗಿತ್ತು ಎಂಬ ಆಪಾದನೆಯಿದೆ.
- ವಿಶ್ವಾದ್ಯಂತ ತಲ್ಲಣ ಸೃಷ್ಟಿಸಿದ ಪಿಡುಗೊಂದು ಬಿಲಿಯನ್‌ಗಟ್ಟಲೆ ವ್ಯವಹಾರಕ್ಕೆ ಕಾರಣವಾದದ್ದು ಇತಿಹಾಸ.

---



# ದಾಂಡೇಲಿ ವನ್ಯಜೀವಿ ಅಭಯಾರಣ್ಯ

ದಾಂಡೇಲಿ ವನ್ಯ ಜೀವಿ ಅಭಯಾರ ಣ್ಯವು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಪಟ್ಟಣದ ಸಮೀಪದಲ್ಲಿದೆ. ಇದು ಪಶ್ಚಿಮ ಘಟ್ಟಗಳ ದಟ್ಟ ಅರಣ್ಯ ಪ್ರದೇಶದಲ್ಲಿ ನೆಲೆಗೊಂಡಿದ್ದು, ಕರ್ನಾಟ ಕದ ಅತಿ ದೊಡ್ಡ ವನ್ಯಜೀವಿ ಸಂರಕ್ಷಿತ ಪ್ರದೇಶಗಳಲ್ಲಿ ಒಂದಾಗಿದೆ. ಹಸಿರು ಕಾಡುಗಳು, ಎತ್ತರದ ಮರಗಳು, ಬೆಟ್ಟಗಳು, ಕಣಿವೆಗಳು ಮತ್ತು ಕಾಳಿ ನದಿಯ ನೈಸರ್ಗಿಕ ಸೌಂದರ್ಯದಿಂದ ಈ ಪ್ರದೇಶವು ಪ್ರವಾಸಿಗರನ್ನು ವರ್ಷಪೂರ್ತಿ ಆಕರ್ಷಿಸುತ್ತದೆ.

ಈ ಅರಣ್ಯ ಪ್ರದೇಶವನ್ನು ವನ್ಯಜೀವಿಗಳ ಸಂರಕ್ಷಣೆಗಾಗಿ ಅಭಯಾರಣ್ಯವನ್ನಾಗಿ ಘೋಷಿಸಲಾಗಿದೆ. ನಂತರ ಈ ಪ್ರದೇಶವನ್ನು ಸಂರಕ್ಷಿತ ಅರಣ್ಯ ವಲಯವಾಗಿ ಅಭಿವೃದ್ಧಿಪಡಿಸಿ, ಅಪರೂಪದ ಸಸ್ಯಗಳು ಮತ್ತು ಪ್ರಾಣಿಗಳನ್ನು ಸಂರಕ್ಷಿಸುವ ಕಾರ್ಯವನ್ನು ಕೈಗೊಳ್ಳಲಾಯಿತು.

ದಾಂಡೇಲಿಯ ಸುತ್ತಮುತ್ತ ಹಚ್ಚಹಸಿರಿನ ಕಾಡುಗಳು, ಕಾಳಿ ನದಿಯ ಶಾಂತ ಹರಿವು, ಜಲಪಾತಗಳು, ಗುಹೆಗಳು ಮತ್ತು ಕಲ್ಲಿನ ರಚನೆಗಳು ಪ್ರವಾಸಿಗರಿಗೆ ಅದ್ಭುತ ಅನುಭವವನ್ನು ನೀಡುತ್ತವೆ. ಬೆಳಗಿನ ಸಮಯದಲ್ಲಿ ಮಂಜಿನಿಂದ ಆವೃತವಾದ ಕಾಡಿನ ದೃಶ್ಯ ಅತ್ಯಂತ ಮನಮೋಹಕವಾಗಿರುತ್ತದೆ.

ಈ ಅಭಯಾರಣ್ಯದಲ್ಲಿ ಹಲವಾರು ಬಗೆಯ ಪ್ರಾಣಿಗಳು ಮತ್ತು ಪಕ್ಷಿಗಳು ಕಂಡುಬರುತ್ತವೆ. ಹುಲಿ, ಚಿರತೆ, ಕಪ್ಪು ಚಿರತೆ, ಆನೆ, ಕಾಡೆಮ್ಮೆ , ಜಿಂಕೆ, ಕರಡಿ, ಕಾಡುಹಂದಿ, ಕೋತಿಗಳು, ಹಾವುಗಳ ವಿವಿಧ ಜಾತಿಗಳು.

ಪಕ್ಷಿ ಸಂಪತ್ತು : ದಾಂಡೇಲಿ ಪಕ್ಷಿವೀಕ್ಷಕರ ಸ್ವರ್ಗವೆಂದೇ ಪ್ರಸಿದ್ಧವಾಗಿದೆ. ಇಲ್ಲಿ ಕಾಣಸಿಗುವ. ಪ್ರಮುಖ ಪಕ್ಷಿಗಳು: ಮಾಲಬಾರ್ ಪೈಡ್, ಹಾರ್ನ್‌ಬಿಲ್, ಗ್ರೇಹಾರ್ನ್‌ಬಿಲ್, ನವಿಲು, ಗಿಳಿಗಳು, ಗೂಬೆಗಳು, ಮರಕುಟಿಗ, ಕಿಂಗ್‌ಫಿಷರ್, ಗಿಡುಗಗಳು

ಪ್ರಮುಖ ಆಕರ್ಷಣೆಗಳು :ಕಾಳಿ ನದಿ ರಿವರ್ ರಾಫ್ಟಿಂಗ್ ಮತ್ತು ಬೋಟಿಂಗ್‌ಗೆ ಪ್ರಸಿದ್ಧ. ಸಿಂಥೇರಿ ರಾಕ್ಸ್ ಬೃಹತ್ ಕಲ್ಲಿನ ರಚನೆ

ಕವಳ ಗುಹೆಗಳು ಸುಣ್ಣದ ಕಲ್ಲಿನಿಂದ ನಿರ್ಮಾಣಗೊಂಡಿರುವ ನೈಸರ್ಗಿಕ ಗುಹೆಗಳು.

ಜಂಗಲ್ ಸಫಾರಿ ಕಾಡಿನೊಳಗೆ ವನ್ಯಜೀವಿಗಳನ್ನು ವೀಕ್ಷಿಸುವ ಅವಕಾಶ.

ಪ್ರಕೃತಿ ನಡಿಗೆ ಪ್ರಕೃತಿಯನ್ನು ಹತ್ತಿರದಿಂದ ಅನುಭವಿಸುವ ಅವಕಾಶ.

ಸಾಹಸ ಚಟುವಟಿಕೆಗಳು : ರಿವರ್ ರಾಫ್ಟಿಂಗ್, ಕಯಾಕಿಂಗ, ಜಿಪ್‌ಲೈನ್, ಟ್ರೆಕ್ಕಿಂಗ್, ಕ್ಯಾಂಪಿಂಗ್, ಬೋಟಿಂಗ್, ಪಕ್ಷಿ ವೀಕ್ಷಣೆ, ಜಂಗಲ್ ಸಫಾರಿ

ಭೇಟಿ ನೀಡಲು ಸೂಕ್ತ ಸಮಯ : ಅಕ್ಟೋಬರ್‌ನಿಂದ ಮೇ ತಿಂಗಳವರೆಗೆ ಭೇಟಿ ನೀಡಲು ಅತ್ಯುತ್ತಮ ಕಾಲ. ಈ ಸಮಯದಲ್ಲಿ ಹವಾಮಾನ ಆಹ್ಲಾದಕರವಾಗಿದ್ದು, ವನ್ಯಜೀವಿಗಳ ವೀಕ್ಷಣೆಯೂ ಸುಲಭವಾಗಿರುತ್ತದೆ. ದಾಂಡೇಲಿ ವನ್ಯಜೀವಿ ಅಭಯಾರಣ್ಯವು ಪ್ರಕೃತಿ, ಸಾಹಸ ಮತ್ತು ವನ್ಯಜೀವಿ ಪ್ರಿಯರಿಗೆ ಅತ್ಯುತ್ತಮ ಪ್ರವಾಸಿ ತಾಣವಾಗಿದೆ. ಇಲ್ಲಿನ ಹಸಿರು ಅರಣ್ಯ, ಕಾಳಿ ನದಿ, ವೈವಿಧ್ಯಮಯ ಜೀವಸಂಕುಲ ಮತ್ತು ಸಾಹಸ ಚಟುವಟಿಕೆಗಳು ಪ್ರತಿಯೊಬ್ಬ ಪ್ರವಾಸಿಗನಿಗೂ ಮರೆಯಲಾಗದ ಅನುಭವವನ್ನು ನೀಡುತ್ತವೆ.

ಒಟ್ಟಾರೆ ಪ್ರಕೃತಿಯ ಮಡಿಲಲ್ಲಿ ವಿಶ್ರಾಂತಿ ಪಡೆಯಲು, ಪರಿಸರದ ಮಹತ್ವವನ್ನು ಅರಿಯಲು ಹಾಗೂ ವನ್ಯಜೀವಿಗಳನ್ನು ಸಮೀಪದಿಂದ ನೋಡುವ ಅವಕಾಶವನ್ನು ದಾಂಡೇಲಿ ಒದಗಿಸುತ್ತದೆ. ಆದ್ದರಿಂದ ಇದು ಕರ್ನಾಟಕದ ಅತ್ಯಂತ ಜನಪ್ರಿಯ ಮತ್ತು ಮಹತ್ವದ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ.

**– ರಮೇಶ ನಾಯ್ಕ,** ಉಪ್ಪುಂದ, ಬೈಂದೂರು



## ವೇಟ್‌ಲಿಫ್ಟಿಂಗ್: ಬೆಳ್ಳಿ ಗೆದ್ದ ಜ್ಞಾನೇಶ್ವರಿ ಯಾದವ್



• ಪ್ರಜೋದಯ ವರದಿ

**ಗ್ಲಾಸ್ಗೊ:** ಕಾಮನ್‌ವೆಲ್ತ್ ಕ್ರೀಡಾಕೂಟದ ಮಹಿಳೆಯರ 53 ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್‌ಸ್ಪರ್ಧೆಯಲ್ಲಿ ಭಾರತದ ಜ್ಞಾನೇಶ್ವರಿ ಯಾದವ್ ಅವರು ಬೆಳ್ಳಿ ಪದಕ ಗೆದ್ದಿದ್ದಾರೆ.

ಏಷ್ಯನ್ ಚಾಂಪಿಯನ್‌ಶಿಪ್‌ನ ಕಂಚಿನ ಪದಕ ವಿಜೇತ ವೇಟ್ ಲಿಫ್ಟರ್ ಆಗಿರುವ ಜ್ಞಾನೇಶ್ವರಿ ಯಾದವ್, ಸ್ನ್ಯಾಚ್ ವಿಭಾಗದಲ್ಲಿ 88 ಕೆ.ಜಿ ಮತ್ತು ಕ್ಲೀನ್ ಅಂಡ್ ಜರ್ಕ್ ವಿಭಾಗದಲ್ಲಿ 111 ಕೆ.ಜಿ ಸೇರಿ ಒಟ್ಟು 199 ಕೆ.ಜಿ ತೂಕವನ್ನು ಎತ್ತಿದರು.

ನೈಜೀರಿಯಾದ ಒನೊಮೆ ಒಮೊಲೊಲ ಡಿಡಿಹ್ ಅವರು ಒಟ್ಟು 206 ಕೆ.ಜಿ ಎತ್ತುವ ಮೂಲಕ ಚಿನ್ನದ ಪದಕ ಪಡೆದರು. ಕೆನಡಾದ ರೆಬೆಕಾ ಗ್ರೌಲ್ಸ್ ಅವರು ಒಟ್ಟು 178 ಕೆ.ಜಿ ಎತ್ತುವ ಮೂಲಕ ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಮಹಿಳೆಯರ 48 ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತದ ಮೀರಾಬಾಯಿ ಚಾನು ಅವರು ಭಾನುವಾರ (ಜುಲೈ 26) ಚಿನ್ನದ ಪದಕ ಗೆದ್ದಿದ್ದರು.

# ಹೋರಾಟಗಾರರ ವಿರುದ್ಧ ಕ್ರಮ ಸಹಿಸುವುದಿಲ್ಲ

## ಕೇಂದ್ರ ಸರ್ಕಾರಕ್ಕೆ ಸಿಜೆಪಿ ಎಚ್ಚರಿಕೆ | ಸ್ಪಷ್ಟನೆ ನೀಡುವಂತೆ ಆಗ್ರಹ

• ಪ್ರಜೋದಯ ವರದಿ



**ನವದೆಹಲಿ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ನಡೆದ ಹೋರಾಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ವಿರುದ್ಧ ಕಠಿಣ ದಂಡನಾತ್ಮಕ ಕ್ರಮ ಕೈಗೊಳ್ಳುವುದಿಲ್ಲವೆಂದು ಭರವಸೆ ನೀಡಿದ್ದ ಕೇಂದ್ರ ಸರ್ಕಾರ ಕೊಟ್ಟ ಮಾತು ತಪ್ಪುತ್ತಿದೆ ಎಂದು ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ಸೋಮವಾರ ಆರೋಪಿಸಿದೆ.

ರಾಷ್ಟ್ರವ್ಯಾಪಿ ಪ್ರತಿಭಟನೆಯನ್ನು ಸ್ಥಗಿತಗೊಳಿಸುವ ಮೊದಲು ಒಮ್ಮತಕ್ಕೆ ಬರಲಾಗಿದ್ದರೂ ನೂರಾರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಹಲವಾರು ರಾಜ್ಯಗಳಲ್ಲಿ ಪೊಲೀಸ್ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಿಜೆಪಿ ಆರೋಪಿಸಿದೆ.

ಸಿಜೆಪಿ ವಕ್ತಾರ ಅಶುತೋಷ್ ರಂಕಾ ಅವರು ಈ ಕುರಿತು ಮಾಹಿತಿ ನೀಡಿದ್ದು, ಪ್ರತಿಭಟನಾಕಾರರ ವಿರುದ್ಧ ಪೊಲೀಸ್ ಕ್ರಮಕ್ಕೆ ಸಂಬಂಧಿಸಿ ಸರ್ಕಾರದೊಂದಿಗೆ ಮಾಡಿಕೊಂಡ ತಿಳಿವಳಿಕೆಯ ಸಂಪೂರ್ಣ ಉಲ್ಲಂಘನೆಯಾಗುತ್ತಿರುವುದನ್ನು ನೋಡುತ್ತಿದೆ ಎಂದು ಹೇಳಿದ್ದಾರೆ.

ಪ್ರತಿಭಟನಾಕಾರರ ವಿರುದ್ಧ ಪೊಲೀಸ್ ಕ್ರಮ ಕೈಗೊಳ್ಳದಿರುವ ಬಗ್ಗೆ ಒಪ್ಪಂದದ ಸಂಪೂರ್ಣ ಉಲ್ಲಂಘನೆಯನ್ನು ನಾವು ಗಮನಿಸುತ್ತಿದ್ದೇವೆ. ಬಿಹಾರ ಮತ್ತು ಬಂಗಾಳದಲ್ಲಿ ನೂರಾರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ದೆಹಲಿ ಮತ್ತು ಇತರ ರಾಜ್ಯಗಳಲ್ಲಿ ನೂರಾರು ಜನರ ಮೇಲೆ ಕಣ್ಗಾವಲು ಇರಿಸಲಾಗಿದ್ದು ಬೆದರಿಕೆ ಹಾಕಲಾಗುತ್ತಿದೆ. ಪ್ರತಿಭಟನಾಕಾರರನ್ನು ಬೆಂಬಲಿಸುವ ಸ್ವಯಂ ಸೇವಕರ ಬಂಧನದ ಬಗ್ಗೆ ದೆಹಲಿಯಲ್ಲಿ ಹಲವಾರು ವರದಿಗಳು ಹೊರಬರುತ್ತಿವೆ ಎಂದಿದ್ದಾರೆ.

ವಿದ್ಯಾರ್ಥಿಗಳು ಮತ್ತು ಇತರ ಪ್ರತಿಭಟನಾಕಾರರನ್ನು ವಿವಿಧ ರಾಜ್ಯ ಸಂಸ್ಥೆಗಳು, ವಿಶೇಷವಾಗಿ ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಟಾರ್ಗೆಟ್ ಮಾಡಿ ಬಂಧಿಸುವ ವರದಿಗಳು ಬಂದಿವೆ. ಬಿಜೆಪಿ ಅಥವಾ ಎನ್‌ಡಿಎ ಆಡಳಿತವಿರುವ ರಾಜ್ಯಗಳಲ್ಲಿ ಪ್ರತಿಭಟನಾಕಾರರ ವಿರುದ್ಧ ಯಾವುದೇ ದಂಡನಾತ್ಮಕ ಕ್ರಮ ಕೈಗೊಳ್ಳುವುದಿಲ್ಲ ಎಂದು ಕೇಂದ್ರ ಸರ್ಕಾರ ನಮಗೆ ಭರವಸೆ ನೀಡಿದ ನಂತರವೇ ಕಾಕ್ರೋಚ್ ಜನತಾ ಪಕ್ಷ ತನ್ನ ರಾಷ್ಟ್ರವ್ಯಾಪಿ ಪ್ರತಿಭಟನೆಯನ್ನು ಹಿಂತೆಗೆದುಕೊಂಡಿತು. ಆದ್ದರಿಂದ ಈ ರಾಜ್ಯಗಳಿಂದ ಹೊರಬರುತ್ತಿರುವ ವರದಿಗಳು ತೀವ್ರ ಕಳವಳಕಾರಿ ವಿಷಯವಾಗಿದೆ ಎಂದು ಅವರು ಹೇಳಿದ್ದಾರೆ.

**ವಕೀಲರೊಂದಿಗೆ ಸಮನ್ವಯ**

ಬಂಧಿತರ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಕಾನೂನು ನೆರವು ನೀಡಲು ತನ್ನ ಕಾನೂನುತಂಡವು ಸಂಬಂಧಪಟ್ಟ ರಾಜ್ಯಗಳಲ್ಲಿನ ವಕೀಲರೊಂದಿಗೆಸಮನ್ವಯ ಸಾಧಿಸುತ್ತಿದೆಂದು ಸಂಘಟನೆ ಹೇಳಿದೆ.

ಬಂಧಿತರ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಮತ್ತು ದೇಶದಲ್ಲಿ ಎಲ್ಲಿಯಾ ದರೂ ಪ್ರತಿಭಟನಾಕಾರರ ವಿರುದ್ಧ ಯಾವುದೇ ಬಲವಂತದ ಅಥವಾ ಪ್ರತೀಕಾರದ ಕ್ರಮವನ್ನು ತಡೆಯುವ ಮೂಲಕ ಮಾತುಕತೆಯ ಸಮಯದಲ್ಲಿ ನೀಡಿದ ಭರವಸೆಯನ್ನು ಗೌರವಿಸುವಂತೆ ಕೇಂದ್ರವನ್ನು, ವಿಶೇಷವಾಗಿ ನಡ್ಡಾ ಮತ್ತು ಸಿಂಗ್ ಅವರನ್ನು ಸಿಜೆಪಿ ಒತ್ತಾಯಿಸಿದೆ ಅಷ್ಟೇ ಅಲ್ಲದೇ ಒಪ್ಪಂದವನ್ನು ಉಲ್ಲಂಘಿಸಿದರೆ ನಾಳೆಯಿಂದ ಮತ್ತೆ ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದೆ.

**ಮತ್ತೆ ಹೋರಾಟದ ಎಚ್ಚರಿಕೆ**

ನೋಂದಣಿಯಾಗಿರುವ ಎಫ್‌ಐಆರ್ ಗಳನ್ನು ಸಹ ಹಿಂಪಡೆಯಬೇಕು ಎಂದು ಇದೇ ವೇಳೆ ಸಿಜೆಪಿ ಆಗ್ರಹಿಸಿದೆ. ದೇಶಾದ್ಯಂತ ಪ್ರತಿಭಟನೆಯನ್ನು ಸ್ಥಗಿತಗೊಳಿಸುವ ನಮ್ಮ ನಿರ್ಧಾರವನ್ನು ಉತ್ತಮ ನಂಬಿಕೆಯಿಂದ ತೆಗೆದುಕೊಳ್ಳಲಾಗಿದೆ. ಸರ್ಕಾರ ತನ್ನ ಮಾತಿನಂತೆ ನಿಲ್ಲುತ್ತದೆಂಬ ಭರ ವಸೆಯ ಆಧಾರದ ಮೇಲೆ ಮಾತ್ರ ಪ್ರತಿಭಟನೆ ಹಿಂಪಡೆಯಲಾಗಿದೆ. ಆ ಭರವಸೆಯಲ್ಲಿ ವ್ಯತ್ಯಾಸವಾದರೆ ಕೇವಲ ಕಾಕ್ರೋಚ್ ಜನತಾ ಪಕ್ಷದೊಂದಿಗಿನ ನಂಬಿಕೆಯ ಉಲ್ಲಂಘನೆಯಾಗು ವುದಲ್ಲದೆ ಪ್ರತಿಭಟನೆಗಳಿಗಿಂತ ಮಾತುಕತೆಯನ್ನು ಆರಿಸಿಕೊಂಡ ಲಕ್ಷಾಂತರ ಯುವ ಭಾರತೀಯರೊಂದಿಗೆ ಸಾರ್ವಜನಿಕ ನಂಬಿಕೆಯ ಉಲ್ಲಂಘನೆಯಾಗುತ್ತದೆಂದು ಸಿಜೆಪಿ ಎಚ್ಚರಿಕೆ ನೀಡಿದೆ.

ಭರವಸೆಯ ಯಾವುದೇ ಉಲ್ಲಂಘನೆಯು ಯುವಜನರಿಗೆ ಸಂಪೂರ್ಣವಾಗಿ ಸ್ವೀಕಾರಾ ರ್ಹವಲ್ಲ ಎಂದು ಎಚ್ಚರಿಸಿರುವ ಸಿಜೆಪಿ, ಎಲ್ಲಾ ಬಂಧಿತರನ್ನು ಬಿಡುಗಡೆ ಮಾಡಬೇಕು ಮತ್ತು ಎಲ್ಲಾ ಎಫ್‌ಐಆರ್ ಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಮತ್ತಷ್ಟು ಪ್ರತಿಭಟನೆ ತೀವ್ರಗೊಳಿಸಲಾಗುತ್ತದೆಂದು ಎಚ್ಚರಿಕೆ ನಿಡಿದೆ. ಕಾನೂನು ಪ್ರಕರಣಗಳ ಕುರಿತಾದ ಲಿಖಿತ ಒಪ್ಪಂದವನ್ನು ನಮ್ಮೊಂದಿಗೆ ಹಂಚಿಕೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆಂದು ಸಿಜೆಪಿ ತಿಳಿಸಿದೆ.

## ಪ್ರಿಯಕರನೊಂದಿಗೆ ಸೇರಿ ಕಳ್ಳತನ ಮಾಡಿದ ಸೊಸೆ

» ಮೊದಲನೇ ಪುಟದಿಂದ

ಶಾಲೆಯಿಂದ ಕರೆದುಕೊಂಡು ಮನೆಗೆ ಬಂದ ವೇಳೆ ಮುಂಬಾಗಿಲು ತೆರೆದಿದ್ದು, ಒಳಗೆ ಹೋಗಿ ನೋಡಿದಾಗ ಬೀರುವಿನಲ್ಲಿಟ್ಟಿದ್ದ ಒಡವೆ ಹಾಗು ನಗದು ಕಳುವಾಗಿರುವುದು ಬೆಳಕಿಗೆ ಬಂದಿದೆ. ಕೂಡಲೇ ಸೊಸೆಯನ್ನು ವಿಚಾರಿಸಿದ್ದು ನಾನು ಮನೆಯನ್ನು ಲಾಕ್ ಮಾಡಿಕೊಂಡು ಬಂದಿದ್ದೇನೆ ಯಾರೋ ಕಳ್ಳರು ಬಂದು ಎಲ್ಲವನ್ನು ದೋಚಿ ಪರಾರಿಯಾಗಿದ್ದಾಳೆಂದು ನಾಟಕವಾಡಿದ್ದಾಳೆ.

**ಹಿಂದೆಯೂ ಇದೇ ಕೆಲಸ**

ಈ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿ, ಸೊಸೆಯ ಮೇಲೆಯೇ ಅನುಮಾನಗೊಂಡಿದ್ದ ಅತ್ತೆ-ಮಾವ ಪೊಲೀಸರಿಗೆ ಹಿಂದೆ ನಡೆದಿದ್ದ ಘಟನೆ ತಿಳಿಸಿದ್ದಾರೆ. ಕೆಲ ತಿಂಗಳ ಹಿಂದೆ ಅತ್ತೆ ಬಳಿಯಿದ್ದ ಬೀರುವಿನ ಕೀ ಕದ್ದು ತನಗೆ ಸೇರಿದ 200 ಗ್ರಾಂ ಒಡವೆಗಳನ್ನು ಕದ್ದು ತನ್ನ ಪ್ರಿಯಕರನಿಗೆ ನೀಡಿದ್ದಳು. ನಂತರ ನನ್ನ ಒಡವೆಗಳು ಕಳುವಾಗಿವೆ ಎಂದು ನಾಟಕವಾಡಿದ್ದಳು. ಇದೇ ವಿಚಾರಕ್ಕೆ ಅತ್ತೆ-ಸೊಸೆ ಜೊತೆ ಜಗಳ ನಡೆದು ಮಕ್ಕಳನ್ನು ಕರೆದುಕೊಂಡು ಪ್ರಿಯಕರನ ಜೊತೆ ತೆರಳಿದ್ದಳು. ಆನಂತರ ರಾಜಿ ಸಂಧಾನ ಮಾಡಿ ಪತಿ ಮನೆಗೆ ಆಕೆಯ ಪೋಷಕರು ಕಳುಹಿಸಿದ್ದರು.

ಪರಮೇಶ್ ಆ ಚಿನ್ನಾಭರಣಗಳನ್ನು ಅಡವಿಟ್ಟು 8 ಲಕ್ಷ ಸಾಲ ಪಡೆದಿದ್ದ. ಮುಂದಿನ ವಾರ ಅಮೃತಾ ಮಾವನ ಮನೆಯಲ್ಲಿ ಒಸಗೆ ಕಾರ್ಯಕ್ರಮವಿದ್ದದ್ದರಿಂದ ಪರಮೇಶ್‌ಗೆ ಕರೆ ಮಾಡಿ, ತಾನು ನೀಡಿದ್ದ ಚಿನ್ನಾಭರಣ ವಾಪಾಸ್ ಕೊಡುವಂತೆ ಕೇಳಿದ್ದಾಳೆ. ಇದಕ್ಕೆ ಪ್ರಿಯಕರ ಇಲ್ಲಸಲ್ಲದ ಸಬೂಬು ಹೇಳಿದ್ದಾನೆ. ಆದರೆ, ಪತಿ ಮನೆಯವರಿಗೆ ಪುನಃ ಅನುಮಾನ ಬರುತ್ತದೆ ಎಂಬ ಕಾರಣಕ್ಕೆ ಮನೆಯ ಬೀರುವಿನಲ್ಲಿಟ್ಟಿದ್ದ ಅರ್ಧ ಕೋಟಿಗೂ ಹೆಚ್ಚು ಮೌಲ್ಯದ ಚಿನ್ನಾಭರಣ ಹಾಗು ನಗದನ್ನು ನೀಡಿ, ಹಿಂದೆ ನೀಡಿದ್ದ ಒಡವೆಗಳನ್ನು ಬಿಡಿಸಿಕೊಂಡು ತರುವಂತೆ ಹೇಳಿರುವುದು ತನಿಖೆ ವೇಳೆ ಬಯಲಾಗಿದೆ.

## ಸಮರ್ಪಕ ವಿದ್ಯುತ್ ಪೂರೈಕೆಗೆ ನಿರ್ದೇಶನ

» ಮೊದಲನೇ ಪುಟದಿಂದ

ಸಭೆಯಲ್ಲಿ ಐಪಿ ಫೀಡರ್ ಸಮಸ್ಯೆ, ಗಂಗಾ ಕಲ್ಯಾಣ ಯೋಜನೆಯ ವಿದ್ಯುತ್ ಸಂಪರ್ಕಗಳನ್ನು ಶೀಘ್ರ ಅಳವಡಿಸುವುದು, ದಿಡಗ ಭಾಗದಲ್ಲಿ ರೈತರು ಎದುರಿಸು ತ್ತಿರುವ ಸಮಸ್ಯೆಗಳ ಪರಿಹಾರ ಹಾಗು ಸಬ್ಬನಹಳ್ಳಿ ಲಿಂಕ್ ಲೈನ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಂಪರ್ಕ ಕಲ್ಪಿಸುವುದು ಸೇರಿ ಹಲವು ವಿಷಯಗಳ ಬಗ್ಗೆ ಮಾಹಿತಿ ಪಡೆದರು. ವಿವಿಧ ಗ್ರಾಮಗಳಿಂದ ಬರುತ್ತಿರುವ ವಿದ್ಯುತ್ ಸಂಬಂಧಿತ ದೂರುಗಳಿಗೆ ಅಧಿಕಾರಿಗಳು ತಕ್ಷಣ ಸ್ಪಂದಿಸಿ, ರೈತರು ಹಾಗು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಬೇಕೆಂದರು. ಸೆಸ್ಕಾಂ ಕಾರ್ಯಪಾಲಕ ಅಭಿಯಂತರರಾದ ರತ್ನ, ಹರೀಶ್ ಮತ್ತಿತರರಿದ್ದರು.

## ಮಕ್ಕಳನ್ನು ಸಂಸ್ಕಾರವಂತರನ್ನಾಗಿಸಲು ಸಲಹೆ

• ಪ್ರಜೋದಯ ವರದಿ



**ಹಾಸನ:** ಮಕ್ಕಳಿಗೆ ಕೇವಲ ಅಕ್ಷರ ಜ್ಞಾನ ನೀಡುವುದು ಮಾತ್ರ ಶಿಕ್ಷಣವಲ್ಲ, ಉತ್ತಮ ಸಂಸ್ಕಾರ, ಸದ್ಬುದ್ಧಿ ಮತ್ತು ಮಾನವೀಯ ಮೌಲ್ಯ ಕಲಿಸುವ ಜವಾಬ್ದಾರಿ ಶಿಕ್ಷಕ ಮತ್ತು ಪೋಷಕರದ್ದಾಗಿದೆ ಎಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಬಿ.ಕಾಟೀಹಳ್ಳಿಯಲ್ಲಿರುವ ಕುವೆಂಪು ಶಾಲೆಯಲ್ಲಿ ಸೋಮವಾರ ನಡೆದ ಅಕ್ಷರಾ ಭ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜೀವನದ ಆರಂಭದಲ್ಲೇ ದೊರೆಯುವ ಶಿಕ್ಷಣ ಮತ್ತು ಸಂಸ್ಕಾರವೇ ವ್ಯಕ್ತಿತ್ವದ ಭದ್ರ ಅಡಿಪಾಯವಾಗುತ್ತದೆ. ಹೃದಯಕ್ಕೆ ಬಿದ್ದ ಅಕ್ಷರ ಮತ್ತು ಭೂಮಿಗೆ ಬಿದ್ದ ಬೀಜ ಎಂದಿಗೂ ನಾಶವಾಗುವುದಿಲ್ಲ. ಅವು ಕಾಲ ಕ್ರಮೇಣ ಬೆಳೆಯುತ್ತಾ ಸಮಾಜಕ್ಕೆ ಉತ್ತಮ ಫಲ ನೀಡುತ್ತವೆ. ಆದ್ದರಿಂದ ಮಕ್ಕಳಲ್ಲಿ ಬಾಲ್ಯದಿಂದಲೇ ವಿದ್ಯೆ, ಸಂಸ್ಕಾರ ಮತ್ತು ಮೌಲ್ಯಗಳನ್ನು ಬಿತ್ತಬೇಕೆಂದರು.

ಮನೆಯೇ ಮೊದಲ ಪಾಠ ಶಾಲೆ ಮತ್ತು ತಾಯಿಯೇ ಮೊದಲ ಗುರು ಆಗಿರುತ್ತಾರೆ. ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ತಂದೆ-ತಾಯಿ ಪಾತ್ರ ಮಹತ್ವದ್ದಾಗಿದೆ. ಮಕ್ಕಳಿಗೆ ಜ್ಞಾನ, ವಿದ್ಯೆ, ವಿವೇಕ ಮತ್ತು ನೈತಿಕ ಮೌಲ್ಯಗಳನ್ನು ಕಲಿಸುವ ಜವಾಬ್ದಾರಿ ಕುಟುಂಬದ ಮೇಲಿದೆ. ಶಿಕ್ಷಣದ ಜೊತೆಗೆ ಧಾರ್ಮಿಕ, ಆಧ್ಯಾತ್ಮಿಕ ಹಾಗು ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕಾರ್ಯದರ್ಶಿ ಬಿ.ಈ. ಶಿವರಾಮೇಗೌಡ ಅವರು ಮಾತನಾಡಿ, ಮಕ್ಕಳ ಉತ್ತಮ ಭವಿಷ್ಯ ರೂಪಿಸಲು ಪೋಷಕರು, ಶಿಕ್ಷಕರು ಹಾಗು ಶಿಕ್ಷಣ ಸಂಸ್ಥೆಗಳು ಸಮನ್ವಯ ದಿಂದ ಕಾರ್ಯನಿರ್ವಹಿಸ ಬೇಕೆಂದರು.

ಈ ಸಂದರ್ಭದಲ್ಲಿ ಶಾಲೆಯ ಆಡಳಿತ ಮಂಡಳಿ ನಿರ್ದೇಶಕಿ ಚಂದನಹೇಮಂತ್, ಮುಖ್ಯ ಶಿಕ್ಷಕಿ ಹೆಚ್.ಬಿ.ವಿನುತ, ಎನ್.ದೀಪಾ, ಟಿ.ಎ.ಸವಿತಾ, ಡಿ.ಜೆ.ನವೀನ್ ಕುಮಾರ್ ಮೊದಲಾದವರು ಹಾಜರಿದ್ದರು.

# ಪ್ರಾಣದ ಹಂಗು ತೊರೆದು ಕೆಲಸ ಮಾಡುವ ಯೋಧರ ಸ್ಮರಿಸಿ

## ಮಹಾನಗರ ಪಾಲಿಕೆ ಇಂಜಿನೀಯರ್ ಕವಿತಾ ಸಲಹೆ | ಸಿಆರ್‌ಪಿಎಫ್ ಸಂಸ್ಥಾಪನಾ ದಿನಾಚರಣೆ

• ಪ್ರಜೋದಯ ವರದಿ



**ಹಾಸನ:** ರಾಷ್ಟ್ರ ರಕ್ಷಣೆಗಾಗಿ ಪ್ರಾಣದ ಹಂಗು ತೊರೆದು ಕೆಲಸ ಮಾಡುವ ಯೋಧರ ಸೇವೆಯನ್ನು ಎಷ್ಟು ವರ್ಣಿಸಿದರೂ ಮುಗಿಯುವುದಿಲ್ಲ. ಅವರ ತ್ಯಾಗ, ಸಾಹಸ ಹಾಗು ದೇಶ ಭಕ್ತಿಯನ್ನು ಎಲ್ಲರೂ ಗೌರವಿಸ ಬೇಕೆಂದು ಮಹಾನಗರ ಪಾಲಿಕೆ ಇಂಜಿನೀಯರ್ ಕವಿತಾ ಅವರು ಹೇಳಿದರು.

ನಗರದ ಹೊರವಲಯದ ಕೆಂಚಟ್ಟಹಳ್ಳಿಯ ದೊಡ್ಡಗೇಣಿಗೆರೆ ರಸ್ತೆಯಲ್ಲಿ ನಿರ್ಮಾಣ ಹಂತದಲ್ಲಿರುವ ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರ ಭವನದಲ್ಲಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) 88ನೇ ಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಗಡಿ ಹಾಗು ಆಂತರಿಕ ಭದ್ರತಾ ಕಾರ್ಯಾಚರಣೆಯಲ್ಲಿ ತೊಡಗಿರುವ ಯೋಧರ ಸೇವೆ ಕಠಿಣ ವಾದುದು. ತಮ್ಮ ಮಕ್ಕಳನ್ನು ಕೆಲ ವರ್ಷಗಳ ಕಾಲ ಹಾಸ್ಟೆಲ್‌ಗೆ ಕಳುಹಿಸುವುದಕ್ಕೂ ಪೋಷಕರು ಭಾವನಾತ್ಮಕವಾಗುತ್ತಾರೆ. ಆದರೆ ದೇಶ ಸೇವೆಗಾಗಿ ಮಕ್ಕಳನ್ನು ಸೇನೆಗೆ ಕಳುಹಿಸುವ ಪೋಷಕರ ತ್ಯಾಗ ಮತ್ತು ಮನೋಬಲವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕೆಂದರು.

ಶಾಲಾ ಶಿಕ್ಷಣದಲ್ಲೇ ಮಕ್ಕಳಿಗೆ ಸೈನಿಕರ ಸೇವೆ, ಶಿಸ್ತು ಮತ್ತು ದೇಶ ಭಕ್ತಿಯ ಕುರಿತು ಪ್ರಾಯೋಗಿಕ ಅರಿವು ಮೂಡಿಸುವ ಕಾರ್ಯಕ್ರಮ ರೂಪಿಸಬೇಕು. ಅದರಿಂದ ಮುಂದಿನ ಪೀಳಿಗೆಯಲ್ಲಿ ರಾಷ್ಟ್ರಸೇವೆಯ ಮನೋಭಾವ ಬೆಳೆಯಲು ಸಹಕಾರಿಯಾಗುತ್ತದೆ. ಸರ್ಕಾರಿ ಕಚೇರಿಗಳಲ್ಲಿ ಯೋಧರು ಮತ್ತು ಮಾಜಿ ಯೋಧರಿಗೆ ಅಗತ್ಯ ಗೌರವ ಹಾಗು ಸ್ಪಂದನೆದೊರೆಯಬೇಕು. ತಮ್ಮ ಹಕ್ಕುಗಳಿಗಾಗಿ ಅವರು ಒಗ್ಗಟ್ಟಿನಿಂದ ಧ್ವನಿ ಎತ್ತ ಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ದೇಶ ಸೇವೆಯಲ್ಲಿ ಯೋಧರಷ್ಟೇ ಅವರ ಕುಟುಂಬದವರ ತ್ಯಾಗವೂ ಮಹತ್ತರವಾಗಿದೆ. ಸೇನೆಯಲ್ಲಿ ಮಹಿಳೆಯರೂ ಧೈರ್ಯದಿಂದ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ. ಸರ್ಕಾರಿ ಸೇವೆಯಲ್ಲಿ ಅನೇಕ ಸವಾಲು ಮತ್ತು ಅವಮಾನ ಎದುರಿಸಬೇಕಾಗುತ್ತದೆ. ಆದರೂ ತಮ್ಮ ವೃತ್ತಿಯನ್ನು ಪ್ರೀತಿಸಿ ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಇತರರ ಜೀವನವನ್ನು ಅನುಕರಿಸುವ ಬದಲು ಸಮಾಜ ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡುವ ಮನಸ್ಸು ಇರಬೇಕೆಂದರು.

ನಿವೃತ್ತ ಸಿಆರ್‌ಪಿಎಫ್ ಯೋಧ ಎಂ.ಜಿ.ರಮೇಶ್ ಅವರು ಮಾತನಾಡಿ, ಬ್ರಿಟಿಷರ ಕಾಲದಲ್ಲಿ ಆರಂಭವಾದ ಈ ಪಡೆ ಇಂದು ವಿಶ್ವದ ಅತಿದೊಡ್ಡ ಅರೆಸೇನಾ ಪಡೆಗಳಲ್ಲಿ ಒಂದಾಗಿ ಬೆಳೆದಿದೆ. ದೇಶದ ಆಂತರಿಕ ಭದ್ರತೆ, ಭಯೋತ್ಪಾದನೆ, ನಕ್ಸಲ್ ನಿಗ್ರಹ, ಕೋಮು ಗಲಭೆ ನಿಯಂತ್ರಣ, ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯಾಚರಣೆ ಹಾಗು ಚುನಾವಣೆಗಳ ಯಶಸ್ವಿ ನಿರ್ವಹಣೆಯಲ್ಲಿ ಸಿಆರ್‌ಪಿಎಫ್ ಮಹತ್ವದ ಪಾತ್ರ ವಹಿಸುತ್ತಿದೆಂದು ವಿವರಿಸಿದರು.

ಯುದ್ಧದ ಸಮಯದಲ್ಲಿ ಸೇನೆಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಕಾರ್ಯನಿರ್ವಹಿಸುವ ಈ ಪಡೆ, ಶಾಂತಿಯ ಸಮಯದಲ್ಲೂ ದೇಶದ ಏಕತೆ ಮತ್ತು ಅಖಂಡತೆಯನ್ನು ಕಾಪಾಡುವಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿದೆ. ಆದರೆ ನಿವೃತ್ತ ಅರೆಸೇನಾ ಯೋಧರಿಗೆ ರಾಜ್ಯ ಸರ್ಕಾರದಿಂದ ಸಿಗಬೇಕಾದ ಉದ್ಯೋಗ ಹಾಗು ಕಲ್ಯಾಣ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಿವೃತ್ತ ಯೋಧರಿಗೆ ದೊರೆಯುವ ಅನೇಕ ಸೌಲಭ್ಯಗಳು ಕೇಂದ್ರೀಯ ಅರೆಸೇನಾ ಪಡೆಗಳ ನಿವೃತ್ತ ಯೋಧರಿಗೆ ಲಭ್ಯವಾಗದಿರುವುದು ತಾರತಮ್ಯವಾಗಿದೆ. ಈ ಅಸಮಾನತೆಯನ್ನು ನಿವಾರಿಸಿ ಸಮಾನ ಸೌಲಭ್ಯ ಕಲ್ಪಿಸುವಂತೆ ಸರ್ಕಾರಕ್ಕೆ ಹಲವು ವರ್ಷಗಳಿಂದ ಮನವಿ ಸಲ್ಲಿಸುತ್ತಿದ್ದರೂ ಸೂಕ್ತ ಸ್ಪಂದನೆ ಸಿಕ್ಕಿಲ್ಲವೆಂದು ಹೇಳಿದರು.

ಸಿಆರ್‌ಪಿಎಫ್ ಗೌರವಾಧ್ಯಕ್ಷ ನವಾಬ್ ಖಾನ್, ಸಿಎಪಿಎಫ್ ಅಧ್ಯಕ್ಷ ಪಿ.ವಿ.ನಾಗೇಶ್, ಉಪಾಧ್ಯಕ್ಷ ನಾಗಪ್ಪ, ಮಾಜಿ ಅಧ್ಯಕ್ಷ ಹನುಮಂತಪ್ಪ, ತಾಲ್ಲೂಕು ಅಧ್ಯಕ್ಷಎಂ.ಎನ್.ದಿನೇಶ್, ನಂಜುಂಡೇಗೌಡ ಹಾಗು ಇತರರಿದ್ದರು.

## ನಾಳೆ ಚ.ರಾ.ಪಟ್ಟಣದಲ್ಲಿ ಗುರುಪೂರ್ಣಿಮೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಜು.29ರ ಬುಧವಾರ ಗುರುಪೂರ್ಣಿಮೆ ಮಹೋತ್ಸವ ಆಯೋಜಿಸಲಾಗಿದೆ.

ಜು.28ರ ಮಂಗಳವಾರ ಬೆಳಿಗ್ಗೆ 9 ರಿಂದ ಹೋಮ, ವಿಶೇಷ ಪೂಜೆ, ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ. ಬುಧವಾರ ಬೆಳಿಗ್ಗೆ 4.30ಕ್ಕೆ ಕಾಕಡ ಆರತಿ, 5 ಗಂಟೆಗೆ ಅಭಿಷೇಕ, 6ಕ್ಕೆ ಅಲಂಕಾರ ಪೂಜೆ, 7.30 ರಿಂದ 11.30ರ ವರೆಗೆ ಪ್ರಸಾದ ಮತ್ತು ಫಲಹಾರವಿರುತ್ತದೆ. ಮಧ್ಯಾಹ್ನ 12ಕ್ಕೆ ಆರತಿ, ಮಧ್ಯಾಹ್ನ 1 ಗಂಟೆಗೆ ಅನ್ನದಾನ, ಸಂಜೆ 6 ಗಂಟೆಗೆ ಧೂಪಾರತಿ, ಸಂಜೆ 6.30 ರಿಂದ 9ರ ವರೆಗೆ ಪ್ರಸಾದ ಮತ್ತು ಫಲಹಾರವಿರುತ್ತದೆ. ರಾತ್ರಿ 9 ಗಂಟೆಗೆ ಶೇಜಾರತಿ ಹಾಗು ಬೆಳಿಗ್ಗೆ 7 ರಿಂದ ರಾತ್ರಿ 11ರ ವರೆಗೆ ಬಾಬಾರಿಗೆ ವಿಶೇಷ ಅಲಂಕಾರವಿರುತ್ತದೆ ಮತ್ತು ಬಾಬಾರ ದರ್ಶನ ಇರಲಿದೆ.

**ಭಜನಾ ಕಾರ್ಯಕ್ರಮ:** ಬೆಳಿಗ್ಗೆ 9 ರಿಂದ 10 ಗಂಟೆ ವರೆಗೆ ಶೇಷಾದ್ರಿ ಭಜನಾ ಮಂಡಳಿ, ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ಬ್ರಾಹ್ಮಣ ಮಹಿಳಾ ವೇದಿಕೆ ವತಿಯಿಂದ ಭಜನಾ ಮಂಡಳಿ, ಬೆಳಿಗ್ಗೆ 11 ರಿಂದ 12 ರವರಿಗೆ ವಾಸವಿ ಭಜನಾ ಮಂಡಳಿ, ಮಧ್ಯಾಹ್ನ 1 ರಿಂದ 2 ಗಂಟೆ ವರೆಗೆ ಶ್ರೀಮುಖ ಸರಸ್ವತಿ ಕಲಾ ಕೇಂದ್ರ, ಮಧ್ಯಾಹ್ನ 2 ರಿಂದ 3 ಗಂಟೆವರೆಗೆ ಶ್ರೀನಿಧಿ ಭಜನಾ ಮಂಡಳಿ, ಮಧ್ಯಾಹ್ನ 3 ರಿಂದ 4 ಗಂಟೆ ವರೆಗೆ ರೇಣುಕಾ ಭಜನಾ ಮಂಡಳಿ, ಸಂಜೆ 4 ರಿಂದ 5 ಗಂಟೆ ವರೆಗೆ ಓಂಕಾರೇಶ್ವರ ಭಜನಾ ಮಂಡಳಿ ಹಾಗೂ ಸಂಜೆ 5 ರಿಂದ 6 ಗಂಟೆ ವರೆಗೆ ವೆಂಕಟೇಶ್ವರ ಭಜನಾ ಮಂಡಳಿ ವತಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ.

ಚನ್ನರಾಯಪಟ್ಟಣದ ಸುಧೀರ್ ಶರ್ಮ ಮತ್ತು ತಂಡದವರಿಂದ ಹೋಮ ಮತ್ತು ಹವನ, ನೂತನ್ ವಾದ್ಯ ವೃಂದ ಮಂಜಪ್ಪ ತಂಡದವರಿಂದ ವಾದ್ಯಗೋಷ್ಠಿ ಜರುಗಲಿದೆ ಎಂದು ಸಾಯಿ ಸೇವಕಿ ಪ್ರಭಾ ಕಾಚೇನಹಳ್ಳಿ ಅವರು ತಿಳಿಸಿದ್ದಾರೆ.

## ಬೇಲೂರು ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿ

» ಮೊದಲನೇ ಪುಟದಿಂದ

ಸ್ವಾಮಿಗೌಡ ಮಾತನಾಡಿ, ಹಲವು ದಶಕಗಳಿಂದ ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿರುವ ರೈತರಿಗೆ ನೀಡಲಾಗಿರುವ ಹಕ್ಕುಪತ್ರಗಳನ್ನು ಪ್ರಶ್ನಿಸುವ ಮೂಲಕ ರೈತರನ್ನು ಒಕ್ಕಲೆಬ್ಬಿಸಲು ಸರ್ಕಾರ ಮುಂದಾಗಿರುವ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ತಾಲ್ಲೂಕಿನಲ್ಲಿ 2014ರಿಂದ ಸುಮಾರು 40ರಿಂದ 50 ವರ್ಷಗಳಿಂದ ಸರ್ಕಾರಿ ಭೂಮಿಯನ್ನು ಸಾಗು ವಳಿ ಮಾಡಿಕೊಂಡಿದ್ದ ಸುಮಾರು 2,250 ರೈತರಿಗೆ ಹಕ್ಕು ದಾಖಲೆಗಳನ್ನು ನೀಡಲಾಗಿದೆ. ಇದೀಗ ಕೆಲವು ರಾಜಕೀಯ ಪ್ರೇರಿತ ಕುತಂತ್ರದ ಭಾಗವಾಗಿ ಸಾಮಾಜಿಕ ಕಾರ್ಯಕರ್ತರ ಹೆಸರಿನಲ್ಲಿ ದೂರು ನೀಡಿ, ಸಿಐಡಿ ತನಿಖೆಯ ನೆಪದಲ್ಲಿ ರೈತರ ಹಕ್ಕುಗಳನ್ನು ಕಸಿ ಯುವ ಪ್ರಯತ್ನ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಆರೋಪಿಸಿದರು.

ಎತ್ತಿನಹೊಳೆ ಯೋಜನೆಗಾಗಿ ತಾಲ್ಲೂಕಿನ ಸಾವಿರಾರು ರೈತರು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದರೂ, ಯೋಜನೆಯ ನೀರನ್ನು ಸ್ಥಳೀಯ ರೈತರಿಗೆ ಬಳಸಲು ಅವಕಾಶ ಕಲ್ಪಿಸಿಲ್ಲ. ಭೂಮಿ ಕಳೆದುಕೊಂಡ ರೈತರಿಗೆ ಇದುವರೆಗೂ ಸಮರ್ಪಕ ಪರಿಹಾರ ವಿತರಣೆ ಆಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ರೈತರ ಸಮಸ್ಯೆಗಳನ್ನು ಪರಿಹರಿಸುವ ಬದಲು ಅವ ರಿಗೆ ಅನ್ಯಾಯವಾಗುವ ರೀತಿಯ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತಿದೆ. ರೈತರ ಹಕ್ಕುಗಳನ್ನು ರಕ್ಷಿಸಿ, ಎತ್ತಿನಹೊಳೆ ಯೋಜನೆಯಿಂದ ಭೂಮಿ ಕಳೆದು ಕೊಂಡವರಿಗೆ ಸೂಕ್ತ ಪರಿಹಾರ ಹಾಗೂ ನ್ಯಾಯ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ರೈತ ಸಂಘದ ಕಾರ್ಯದರ್ಶಿ ಬಸವರಾಜ್, ರೈತ ಮುಖಂಡರಾದ ಕುಮಾರ್, ಬಿಟೆ ಮನೆಸುರೇಶ್, ಶ್ರೀನಿವಾಸ್, ಮಲ್ಲಿಕಾರ್ಜುನ್, ಮನು, ಸಚಿನ್ ಸೇರಿ ನೂರಾರು ರೈತರು ಭಾಗವಹಿಸಿದ್ದರು.

## ಇಲಾಖೆಗಳ ತಿಕ್ಕಾಟಕ್ಕೆ ಬಲಿಯಾದ ವಾಚಿಂಗ್ ಟವರ್

» ಮೊದಲನೇ ಪುಟದಿಂದ

ಅನುದಾನವೂ ಸರ್ಕಾರದ ಖಜಾನೆಗೆ ಮರಳಿತು. ಈ ಸ್ಥಳದಿಂದ ಜೇನುಕಲ್ಲು ಬೆಟ್ಟ, ದೀಪದಕಲ್ಲು ಬೆಟ್ಟ ಹಾಗು ಪಾಂಡವರ ಬೆಟ್ಟಗಳ ಸಾಲು, ಹಸಿರು ಕಾಡಿನ ನಡುವೆ ಮಂಜು ಹೊದ್ದ ಬೆಟ್ಟಗಳ ವಿಹಂಗಮ ದೃಶ್ಯ ಕಣ್ಮನ ಸೆಳೆ ಯುತ್ತದೆ. ವಾಚಿಂಗ್ ಟವರ್ ಪೂರ್ಣ ಗೊಂಡಿದ್ದರೆ ಮಲೆನಾಡಿನ ಪ್ರಮುಖ ವೀಕ್ಷಣಾ ತಾಣವಾಗಿ ರೂಪುಗೊಳ್ಳುವ ಎಲ್ಲಾ ಸಾಧ್ಯತೆಗಳೂ ಇದ್ದವು. ಜೊತೆಗೆ ಸ್ಥಳೀಯರಿಗೂ ಅನು ಕೂಲವಾಗುತ್ತಿತ್ತು, ಪ್ರವಾಸೋದ್ಯಮವೂ ಅಭಿವೃದ್ಧಿ ಹೊಂದು ತ್ತಿತ್ತು. ಆದರೆ, ಅರಣ್ಯ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ನಡುವಿನ ತಿಕ್ಕಾಟಕ್ಕೆ ಸಿಲುಕಿ ಕೈಗೊಂಡಿದ್ದ ಯೋಜನೆಯೊಂದು ಸದ್ಯ ಕಾಡುಪಾಲಾಗಿದೆ.

**ಪ್ರವೇಶಕ್ಕೆ ನಿರ್ಬಂಧ**

ಕೆಲವು ವರ್ಷಗಳ ಹಿಂದೆ ಈ ಪ್ರದೇಶಕ್ಕೆ ಅನ ಧಿಕೃತ ಪ್ರವೇಶ ಮಾಡಿ ಅನೈತಿಕ ಚಟುವಟಿಕೆ ಗಳು ನಡೆಯುತ್ತಿದ್ದ ಹಿನ್ನಲೆ ಅರಣ್ಯ ಇಲಾಖೆ ಪ್ರವೇಶಕ್ಕೆ ನಿರ್ಬಂಧ ಹೇರಿದೆ. ವಾಚಿಂಗ್ ಟವರ್‌ಗೆ ತೆರಳುವ ರಸ್ತೆಯನ್ನು ಬಂದ್ ಮಾಡಲಾಗಿದ್ದು, ಸಿಬ್ಬಂದಿಯನ್ನು ನಿಯೋಜಿಸಿ ನಿಗಾ ವಹಿಸಲಾಗಿದೆ. ಈಗಾಗಲೇ ಅರ್ಧದಷ್ಟು ಸಿಮೆಂಟ್ ರಸ್ತೆ ನಿರ್ಮಾಣ ಗೊಂಡಿದ್ದು, ಎರಡೂ ಬದಿಗಳಲ್ಲಿ ಭದ್ರತಾ ತಂತಿ ಬೇಲಿ ಅಳವಡಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಿದರೆ ಸುರಕ್ಷಿತ ವಾಗಿ ಪ್ರವಾಸಿಗರಿಗೆ ಅವಕಾಶ ಕಲ್ಪಿಸಬಹು ದಾಗಿದೆ ಎಂದು ಸ್ಥಳೀಯರು ಸೂಚಿಸುತ್ತಾರೆ.

ಈ ಅರಣ್ಯ ಪ್ರದೇಶದಲ್ಲಿ ಹುಲಿ, ಕಾಡಾನೆ, ಕಾಡುಕೋಣ, ಜಿಂಕೆ, ಪುನುಗು ಬೆಕ್ಕು ಸೇರಿ ಅಪರೂಪದ ವನ್ಯಜೀವಿಗಳು ವಾಸಿಸುತ್ತಿರುವುದರಿಂದ ಪರಿಸರ ಸಂರಕ್ಷಣೆಯ ದೃಷ್ಟಿ ಯಿಂದ ಅರಣ್ಯ ಇಲಾಖೆ ಎಚ್ಚರಿಕೆಯ ನಿಲುವು ತಾಳಿರುವುದು ಸಹಜ. ಆದರೆ, ಪ್ರವಾ ಸೋದ್ಯಮ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ನಡುವೆ ಸಮತೋಲನ ಸಾಧಿಸುವ ಜವಾಬ್ದಾರಿ ಸಂಬಂಧಪಟ್ಟ ಇಲಾಖೆಗಳ ಮೇಲಿದೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ನೂರಾರು ಕೋಟಿ ರೂಪಾಯಿ ವೆಚ್ಚ ಮಾಡುತ್ತಿರುವ ಸಂದರ್ಭದಲ್ಲಿ ಕೇವಲ 70 ಲ.ರೂ. ವೆಚ್ಚದ ಈ ಯೋಜನೆ ಎರಡು ದಶಕಗಳಿಂದ ಅಪೂರ್ಣವಾಗಿರುವುದು ಆಡಳಿತಾತ್ಮಕ ವೈಫಲ್ಯದ ಉದಾಹರಣೆಯಾಗಿದೆ.

## ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್‌ಗೆ ಸುಪ್ರೀಂ ಕಿಡಿ

**ನವದೆಹಲಿ:** ಶಾಂತಿಯುತ ಪ್ರತಿಭಟನೆಯನ್ನು ಮಾಡುವ ಹಕ್ಕು ಎಲ್ಲರಿಗೂ ಇದೆ. ಈ ವೇಳೆ ನಡೆಯುವಪೊಲೀಸ್‌ದೌರ್ಜನ್ಯ ಅಥವಾಲಾಠಿ ಚಾರ್ಜ್ ಅನ್ನು ಸಮರ್ಥಿಸಲು ಸಾಧ್ಯವಿಲ್ಲವೆಂದು ಸುಪ್ರೀಂಕೋರ್ಟ್ ಸೋಮವಾರ ಹೇಳಿದೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಇತರ ಪರೀಕ್ಷಾ ಅಕ್ರಮಗಳ ಕುರಿತು ದೇಶದಾದ್ಯಂತ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ವಿರುದ್ಧ ಪೊಲೀಸ್ ದೌರ್ಜನ್ಯ ಎಸಗುತ್ತಿದ್ದಾರೆಂದು ಆರೋಪಿಸಿ ಸಲ್ಲಿಸಲಾದ ಅರ್ಜಿಗಳನ್ನು ಮಂಗಳವಾರ ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್‌ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ ಹೇಳಿದೆ.

ಪ್ರತಿಭಟನೆಯ ಸಮಯದಲ್ಲಿ ದಾಳಿಗೊಳಗಾದ ಪೊಲೀಸ್ ಸಿಬ್ಬಂದಿಯ ಕುಟುಂಬ ಸದಸ್ಯರು ಸಲ್ಲಿಸಿದ ಪ್ರತ್ಯೇಕ ಅರ್ಜಿಯನ್ನು ಮತ್ತು ಇತರ ಅರ್ಜಿಗಳ ವಿಚಾರಣೆಗೆ ಕೂಡ ಪೀಠವು ಒಪ್ಪಿಕೊಂಡಿದೆ. ಪ್ರತಿಭಟನೆ ನಡೆಯುತ್ತಿದೆ ಎಂದಾಕ್ಷಣ ಲಾಠಿ ಚಾರ್ಜ್ ಆಗಲೇ ಬೇಕೆಂದಿಲ್ಲ. ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಅತ್ಯಗತ್ಯವಾದ ಸ್ವಯಂ-ಶಿಸ್ತು ಅಗತ್ಯವಾಗಿದೆಂದು ಸಿಜೆಐ ಹೇಳಿದ್ದಾರೆ.

ಜು.20ರಂದು ದೆಹಲಿಯಲ್ಲಿ ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ನೇತೃತ್ವ ದಲ್ಲಿ ನಡೆದ ಸಂಸತ್ ಚಲೋ ಮೆರವಣಿಗೆಯ ವೇಳೆ ಪ್ರತಿಭಟನಾಕಾರರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಘರ್ಷಣೆ ನಡೆದಿತ್ತು. ಸಂಸತ್ತಿನತ್ತ ಸಾಗಲು ಯತ್ನಿಸುತ್ತಿದ್ದ ಜನಸಮೂಹವನ್ನು ಚದುರಿಸಲು ಪೊಲೀಸರು ಲಾಠಿ ಮತ್ತು ಅಶ್ರುವಾಯು ಬಳಸಿದ್ದರು.

## ನೂತನ ಕಾರ್ಯಪಡೆಯಿಂದ ಶಿಕ್ಷಣ ವ್ಯವಸ್ಥೆ ಅಧಪತನ: ಆರೋಪ

• ಪ್ರಜೋದಯ ವರದಿ

**ಹಾಸನ:** ದೇಶಾದ್ಯಂತ ಪರೀಕ್ಷಾ ವ್ಯವಸ್ಥೆ ಸುಧಾರಣೆ ಹೆಸರಿನಲ್ಲಿ ಉದ್ಯಮಿ ನಂದನ್ ನಿಲೇಕಣಿ ನೇತೃತ್ವದಲ್ಲಿ ಕಾರ್ಯಪಡೆ ರಚಿಸಿರುವ ಕೇಂದ್ರ ಸರ್ಕಾರ ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಅಧಪತನಕ್ಕೆ ಕೊಂಡೊಯ್ಯಲು ಪ್ರಯತ್ನಿಸುತ್ತಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಸಂಘಟನೆ (ಎಐಡಿಎಸ್‌ಒ) ಆರೋಪಿಸಿದೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಯ ಮಾರನೇ ದಿನವೇ ಕೇಂದ್ರ ಪ್ರಧಾನಿ ನರೇಂದ್ರ ಮೋದಿ ಸುಧಾರಣೆಯ ಹೆಸರಿನಲ್ಲಿ ಮತ್ತೊಂದು ಹೊಸ ತಂತ್ರವನ್ನು ಹೆಣೆದಿದ್ದಾರೆ. ಈ ಮೂಲಕ ಕೇಂದ್ರ ಸರ್ಕಾರವು ವಿದ್ಯಾರ್ಥಿ ಸಮುದಾಯಕ್ಕೆ ಮತ್ತೆ ದ್ರೋಹ ಬಗೆದಿದೆ. ಇಂತಹ ಸಂದರ್ಭದಲ್ಲಿ ಯಾವುದೋ ಒಂದು ಸುಧಾರಣಾ ಸಮಿತಿ ಯನ್ನು ನೇಮಿಸುವುದು ಅಥವಾ ಸಣ್ಣಪುಟ್ಟ ಆಡಳಿತಾತ್ಮಕ ಬದಲಾವಣೆ ಮಾಡುವುದು ಪರಿಹಾರವಲ್ಲ ಎಂದುಎಐಡಿಎಸ್‌ಒ ಅಭಿಪ್ರಾಯಪಟ್ಟಿದೆ.

ಎನ್‌ಟಿಎ ಸಂಸ್ಥೆಯು ವಿದ್ಯಾರ್ಥಿಗಳ ಹಿತಕಾಯುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇಂತಹ ಸಮಿತಿಯ ಶಿಫಾರಸುಗಳ ಮೂಲಕ ಆಮೂಲಾಗ್ರ ಸುಧಾರಣೆ ಸಾಧ್ಯವಿಲ್ಲ. ಈಗಾಗಲೇ ಹಿಂದೆ ರಚಿಸಲ್ಪಟ್ಟ ಸಮಿತಿಗಳಿಂದ ಬದಲಾವಣೆಯಾಗಿಲ್ಲ. ಸರ್ಕಾರ ಈ ಕಣ್ಣೊರೆ ಸುವ ತಂತ್ರವನ್ನು ಬಿಟ್ಟು ಈ ಎನ್‌ಟಿಎ ಸಂಸ್ಥೆಯನ್ನೇ ಸಂಪೂರ್ಣವಾಗಿ ರದ್ದುಗೊಳಿಸಬೇಕೆಂದು ನಾವು ಆಗ್ರಹಿಸುತ್ತೇವೆ. ಒಂದು ವೇಳೆ ಸರ್ಕಾರಕ್ಕೆ ನಿಜವಾಗಿಯೂ ಸುಧಾರಣೆ ತರುವ ಇಚ್ಛೆ ಇದ್ದಿದ್ದರೆ, ಕಾರ್ಪೊರೇಟ್ ಐಟಿ ಕಾರ್ಯ ನಿರ್ವಾಹಕರ ಬದಲು ಶಿಕ್ಷಣ ತಜ್ಞರು, ಮನ ಶಾಸ್ತ್ರಜ್ಞರು ಮತ್ತು ಬೋಧನಾ ತಜ್ಞರನ್ನು ನೇಮಿಸುತ್ತಿತ್ತು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನೀಟ್ ಪರೀಕ್ಷೆಯನ್ನು ಪೆನ್ ಮತ್ತು ಪೇಪರ್ ಮಾದರಿಯಿಂದ ಆನ್‌ಲೈನ್‌ಗೆ ಬದಲಾಯಿಸಲಾಗುತ್ತದೆ ಎಂದಿದ್ದಾರೆ. ಅರೆ-ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳು ಅಥವಾ ಡಿಜಿಟಲ್ ಕಾವಲು ಮಾದರಿಗಳನ್ನು ಜಾರಿಗೆ ತರುವುದು ಅಸಾಧ್ಯ. ಸ್ಥಿರವಾದ ಇಂಟರ್‌ನೆಟ್ ಸಂಪರ್ಕ, ನಿರಂತರ ವಿದ್ಯುತ್ ಸರಬರಾಜು ಅಥವಾ ಡಿಜಿಟಲ್ ಸಾಕ್ಷರತೆ ಇಲ್ಲದ ಅಭ್ಯರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ರಚನಾತ್ಮಕವಾಗಿ ವಂಚಿತರಾಗುತ್ತಾರೆ.

ಈ ನಡೆಯು ವೈದ್ಯಕೀಯ ಶಿಕ್ಷಣವನ್ನು ಕೆಲವು ಶ್ರೀಮಂತರು ಮತ್ತು ಪ್ರಭಾವಿಗಳಿಗೆ ಮಾತ್ರ ಸೀಮಿತಗೊಳಿಸಿ, ಮಧ್ಯಮ ವರ್ಗದ ಮತ್ತು ಬಡವರ ಬಹುಸಂಖ್ಯಾತ ಜನಸಂಖ್ಯೆಯನ್ನು ವೈದ್ಯಕೀಯ ಶಿಕ್ಷಣದಿಂದ ದೂರ ತಳ್ಳುವ ನೇರ ಪ್ರಯತ್ನವಾಗಿದೆಂದು ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಸುಷ್ಮಾ ಅಭಿಪ್ರಾಯಪಟ್ಟಿದ್ದಾರೆ.

## ಕೆಪಿಎಸ್‌ಸಿ ನೇಮಕ ಹಗರಣ: ಸಿಬಿಐಗೆ ವಹಿಸಲು ಆಗ್ರಹ

• ಪ್ರಜೋದಯ ವರದಿ

**ಬೆಂಗಳೂರು:** ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ನಡೆದಿರುವ ಅಕ್ರಮದ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಬಿಜೆಪಿ ಆಗ್ರಹಿಸಿದೆ.

ನೀಟ್ ಅಕ್ರಮದವಿರುದ್ಧ ಹೋರಾಟ ನಡೆಸಿದ ಕಾಂಗ್ರೆಸ್‌ಗೆ ಟಕ್ಕರ್ ನೀಡಲು ಕೆಪಿಎಸ್‌ಸಿ ಹಗರಣದ ಅಸ್ತ್ರವನ್ನು ಬಳಸಿಕೊಳ್ಳಲು ಬಿಜೆಪಿ ಮುಂದಾಗಿದೆ. ಕೆಪಿಎಸ್‌ಸಿಯ ಪಶು ವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ 80 ಲ.ರೂ. ವರೆಗೆ ಲಂಚ ಪಡೆದಿರುವ ಗಂಭೀರ ಆರೋಪ ಕೇಳಿಬಂದಿದೆ. ಕೆಪಿಎಸ್‌ಸಿ ಅಕ್ರಮವನ್ನು ಆಂತರಿಕ ತನಿಖೆಯ ಬದಲಾಗಿ ಸಿಬಿಐ ಅಥವಾ ಹೈಕೋರ್ಟ್ ಹಾಲಿ ನ್ಯಾಯಮೂರ್ತಿ ನೇತೃತ್ವದ ಸ್ವತಂತ್ರ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ಬಿಜೆಪಿ ನಿಯೋಗವು ಒತ್ತಾಯಿಸಿದೆ.

ಈ ಸಂಬಂಧ ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲ ವಾದಿ ನಾರಾಯಣಸ್ವಾಮಿ ಹಾಗು ಶಾಸಕ ಸುರೇಶ್ ಕುಮಾರ್ ಅವರ ನಿಯೋಗವು ಕೆಪಿಎಸ್‌ಸಿ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

## ನಗರದಲ್ಲಿ ಮುಂದುವರಿದ ಒತ್ತುವರಿ ತೆರವು

» ಮೊದಲನೇ ಪುಟದಿಂದ

ಮಹಾನಗರ ಪಾಲಿಕೆ ಸಿಬ್ಬಂದಿ ಪರಶುರಾಮ್ ಅವರು ಮಾತನಾಡಿ, ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಸಾರ್ವಜನಿಕ ರಸ್ತೆ ಹಾಗು ಫುಟ್‌ಪಾತ್‌ಗಳ ಮೇಲಿನ ಎಲ್ಲಾ ರೀತಿಯ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲಾಗುತ್ತಿದೆ. ಪಾದಚಾರಿಗಳಿಗೆ ಮೀಸಲಾದ ಫುಟ್‌ಪಾತ್‌ಗಳನ್ನು ವ್ಯಾಪಾರಕ್ಕಾಗಿ ಬಳಸುವುದರಿಂದ ಜನರು ರಸ್ತೆಯಲ್ಲೇ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅದರಿಂದ ಅಪಘಾತಗಳ ಸಂಖ್ಯೆಯೂ ಹೆಚ್ಚುತ್ತಿದ್ದು, ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಕಟ್ಟುನಿಟ್ಟಿನ ಕ್ರಮ ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಕಳೆದ 15 ದಿನಗಳ ಹಿಂದೆಯೇ ಫುಟ್‌ಪಾತ್ ಆಕ್ರಮಿಸಿಕೊಂಡಿದ್ದ ಗೂಡಂಗಡಿ ಹಾಗು ಅಂಗಡಿ ಮಾಲೀಕರಿಗೆ ಸ್ವಯಂ ಪ್ರೇರಿತವಾಗಿ ಒತ್ತುವರಿ ತೆರವುಗೊಳಿಸಿಕೊಳ್ಳುವಂತೆ ಸೂಚಿಸಲಾಗಿತ್ತು. ಸೂಚನೆ ನೀಡಿದರೂ ತೆರವುಗೊಳಿಸದ ಕಾರಣ ಇದೀಗ ಜೆಸಿಬಿ ಯಂತ್ರಗಳ ಮೂಲಕ ಪಾಲಿಕೆ ಸಿಬ್ಬಂದಿ ತೆರವು ಕಾರ್ಯಾಚರಣೆ ನಡೆಸುತ್ತಿದ್ದಾರೆಂದು ವಿವರಿಸಿದರು.

ಕಾರ್ಯಾಚರಣೆ ಕೇವಲ ಸಣ್ಣ ವ್ಯಾಪಾರಿಗಳಿಗಷ್ಟೇ ಸೀಮಿತವಾಗಿಲ್ಲ. ನಗರದ ಕೆಲವು ಪ್ರಮುಖ ವಾಣಿಜ್ಯ ಸಂಸ್ಥೆಗಳ ನಾಮಫಲಕಗಳು ಹಾಗೂ ಜಾಹೀರಾತು ಫಲಕಗಳೂ ಫುಟ್‌ಪಾತ್ ವ್ಯಾಪ್ತಿಗೆ ಅತಿಕ್ರಮಣ ಮಾಡಿರುವುದು ಕಂಡುಬಂದಿದೆ. ಭೀಮಾ ಜ್ಯುವೆಲ್ಲರ್ಸ್, ಹಾಸನ್ ಕ್ಲಬ್ ಸೇರಿ ಹಲವು ದೊಡ್ಡ ಸಂಸ್ಥೆಗಳಿಗೂ ನಿಯಮ ಉಲ್ಲಂಘನೆಯ ಬಗ್ಗೆ ಈಗಾಗಲೇ ಮಾಹಿತಿ ನೀಡಲಾಗಿದ್ದು, ಅವುಗಳ ಅನಧಿಕೃತ ನಾಮಫಲಕಗಳನ್ನು ಸಹ ಶೀಘ್ರದಲ್ಲೇ ತೆರವುಗೊಳಿಸಲಾಗುವುದು.

ಕಾರ್ಯಾಚರಣೆಯಲ್ಲಿ ಯಾವುದೇ ಜನಪ್ರತಿನಿಧಿ, ರಾಜ ಕೀಯ ಮುಖಂಡ ಅಥವಾ ಪ್ರಭಾವಿ ವ್ಯಕ್ತಿಯ ಒತ್ತಡಕ್ಕೆ ಮಣಿಯುವುದಿಲ್ಲ. ಸಾರ್ವಜನಿಕ ಹಿತಾಸಕ್ತಿ ಹಾಗು ಕಾನೂನು ಪಾಲನೆಯೇ ನಮ್ಮ ಆದ್ಯತೆ. ಎಲ್ಲರಿಗೂ ಒಂದೇ ನಿಯಮ ಅನ್ವಯವಾಗಲಿದೆ ಎಂದು ಸ್ಪಷ್ಟಪಡಿಸಿದರು.

## 50 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಚಾಲನೆ | ಶಾಸಕ ಹೆಚ್.ಕೆ.ಸುರೇಶ್ ಭರವಸೆ

# ಮಲೆನಾಡಿನ ಕುಗ್ರಾಮಗಳ ರಸ್ತೆ ಅಭಿವೃದ್ಧಿಗೆ ಒತ್ತು

• ಪ್ರಜೋದಯ ವರದಿ



**ಬೇಲೂರು:** ಮಲೆನಾಡಿನ ಕುಗ್ರಾಮಗಳಲ್ಲಿ ರಸ್ತೆ ಸೇರಿ ಮೂಲಸೌಕರ್ಯಗಳ ಕೊರತೆ ಇರುವುದನ್ನು ಗಮನಿಸಿ ಅಂತಹ ಪ್ರದೇಶಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ತಿಳಿಸಿದರು.

ತಾಲ್ಲೂಕಿನ ಚಿಕ್ಕಬಿಕ್ಕೋಡು ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಚುನಾವಣೆ ಪೂರ್ವದಲ್ಲಿಯೂ ಹಾಗು ಶಾಸಕನಾಗಿ ಆಯ್ಕೆಯಾದ ಬಳಿಕವೂ ಚಿಕ್ಕಬಿಕ್ಕೋಡು ಗ್ರಾಮಕ್ಕೆ ಭೇಟಿ ನೀಡಿ ಇಲ್ಲಿನ ಸಮಸ್ಯೆಗಳನ್ನು ಖುದ್ದಾಗಿ ಪರಿಶೀಲಿಸಿದ್ದೇನೆ. ಚಿಕ್ಕಬಿಕ್ಕೋಡು ಗ್ರಾಮದ ಸುಮಾರು ಒಂದು ಕಿ.ಮೀ. ರಸ್ತೆಯನ್ನು ಶಾಶ್ವತ ವಾಗಿ ಉಳಿಯುವ ರೀತಿಯಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ನಿರ್ಮಿಸಬೇಕೆಂಬುದು ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿತ್ತು. ಈ ಹಿನ್ನಲೆ ಶಾಸಕರ ವಿಶೇಷ ಅನುದಾನದಡಿ 50 ಲಕ್ಷ ರೂ. ಮಂಜೂರು ಮಾಡಲಾಗಿದೆ ಎಂದು ತಿಳಿಸಿದರು.

ಗುತ್ತಿಗೆದಾರರು ಕಾಮಗಾರಿಯನ್ನು ಗುಣಮಟ್ಟದಿಂದ ನಿರ್ವಹಿಸಬೇಕು. ಕಾಮಗಾರಿಯಲ್ಲಿ ಲೋಪವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕೆಂದು ಸೂಚಿಸಿದ ಅವರು, ರಸ್ತೆ ಕಾಮಗಾರಿಯ ಭೂಮಿಪೂಜೆ ಕಾರ್ಯಕ್ರಮಕ್ಕೆ ಇಡೀ ಗ್ರಾಮದ ಜನರು ಆಗಮಿಸಿರುವುದು ಅಭಿವೃದ್ಧಿಯ ಮೇಲಿನ ಗ್ರಾಮಸ್ಥರ ನಿರೀಕ್ಷೆಗೆ ಸಾಕ್ಷಿಯಾಗಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ ಗ್ರಾಮಸ್ಥರು, ವಿದ್ಯಾರ್ಥಿಗಳು, ರೈತರು ಹಾಗೂ ವಾಹನ ಸವಾರರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಶಿವಶಂಕರ್ ಅವರು ಮಾತನಾಡಿ, ಸ್ವಾತಂತ್ರ್ಯ ಬಂದು ಹಲವು ದಶಕಗಳು ಕಳೆದರೂ ಚಿಕ್ಕಬಿಕ್ಕೋಡು ಗ್ರಾಮದ ರಸ್ತೆ ಅಭಿವೃದ್ಧಿಗೆ ಸರ್ಕಾರಗಳು ಸಮರ್ಪಕವಾಗಿ ಸ್ಪಂದಿಸದ ಪರಿಣಾಮ ಗ್ರಾಮಸ್ಥರು ವರ್ಷಗಳಿಂದ ಹದಗೆಟ್ಟ ರಸ್ತೆಯಲ್ಲಿಯೇ ಸಂಚ ರಿಸುವಂತಾಗಿತ್ತು. ಇದೀಗ ಶಾಸಕ ಹೆಚ್.ಕೆ.ಸುರೇಶ್ ಅವರು ಗ್ರಾಮಸ್ಥರ ಮನವಿಗೆ ಸ್ಪಂದಿಸಿ ವಿಶೇಷ ಅನುದಾನದಡಿ 50 ಲಕ್ಷ ರೂ. ಬಿಡುಗಡೆ ಮಾಡಿರುವುದರಿಂದ ರಸ್ತೆಯ ಶಾಪ ವಿಮೋಚನೆಯಾದಂತಾಗಿದೆ ಎಂದು ಹೇಳಿದರು.

ರಸ್ತೆಯ ಅಭಿವೃದ್ಧಿಗಾಗಿ ಈ ಹಿಂದೆ ಗ್ರಾಮಸ್ಥರು ಹಲವು ಬಾರಿ ಹೋರಾಟ ನಡೆಸಿದ್ದರೂ, ಜನಪ್ರತಿನಿಧಿಗಳಿಂದ ಭರವಸೆಗಳು ಮಾತ್ರ ದೊರೆತಿದ್ದವು. ಆದರೆ, ಕಾಮಗಾರಿ ಕೈಗೆತ್ತಿಕೊಳ್ಳಲು ಯಾರೂ ಮುಂದಾಗಿರಲಿಲ್ಲ. ಈ ಹಿನ್ನಲೆ ಶಾಸಕ ಹೆಚ್.ಕೆ.ಸುರೇಶ್ ಅವರು ಗ್ರಾಮಕ್ಕೆ ಭೇಟಿ ನೀಡಿ ಸ್ಥಳೀಯರ ಸಮಸ್ಯೆಯನ್ನು ಖುದ್ದಾಗಿ ಪರಿಶೀಲಿಸಿ, ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಅನುದಾನ ನೀಡಿರುವುದು ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ ಎಂದು ತಿಳಿಸಿದರು.

ಬಿಕ್ಕೋಡು ಹೋಬಳಿ ಮಲೆನಾಡು ಪ್ರದೇಶದಲ್ಲಿರುವುದರಿಂದ ಇಲ್ಲಿನ ಅನೇಕ ಗ್ರಾಮಗಳ ರಸ್ತೆಗಳು ಮಳೆಗಾಲದಲ್ಲಿ ಸಂಪೂರ್ಣ ಹದಗೆಡುತ್ತಿವೆ. ಹೀಗಾಗಿ ಚಿಕ್ಕ ಬಿಕ್ಕೋಡು ರಸ್ತೆಯಂತೆ ಮಲೆನಾಡು ಭಾಗದ ಇತರ ಹದಗೆಟ್ಟ ರಸ್ತೆಗಳನ್ನು ಕೂಡ ಹಂತ ಹಂತವಾಗಿ ಅಭಿವೃದ್ಧಿ ಪಡಿಸಲು ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಗ್ರಾಮದ ಮುಖಂಡರು, ಅಧಿಕಾರಿಗಳು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K
C M Y K
C M Y K
C M Y K